DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ದಶಂಬರ್ 2009

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-9 ಸಂಚಿಕೆ-12 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011

## ಇನ್ನ ರಾಮಮೋಹನ್ ರಾವ್ ಅವರಿಗೆ ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ



ಭಾರತದ ನಾಲ್ವರು ಪ್ರಧಾನ ಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ, ನಾಡು, ನುಡಿಗೆ ವಿಶೇಷ ಸೇವೆ ಸಲ್ಲಿಸಿ ಜನಮನಗೆದ್ದ ಮಹಾನ್ ಸಂಪರ್ಕಾಧಿಕಾರಿ ಶ್ರೀ ಇನ್ನ ರಾಮಮೋಹನ್ ರಾವ್ ಅವರಿಗೆ ಉಡುಪಿ ಪರ್ಯಾಯ ಶ್ರೀ ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಇತ್ತೀಚೆಗೆ ಸಂಪನ್ನಗೊಂಡ ವಿಶಿಷ್ಟ ಸಮಾರಂಭದಲ್ಲಿ ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ ನೀಡಿ ಆಶೀರ್ವದಿಸಿದರು.

ಶ್ರೀ ಅದಮಾರು ಮಠದ ಶ್ರೀ ಸ್ವಾಮೀಜಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಮ ಮೋಹನ್‌ರಾವ್ ಅವರ ಧರ್ಮಪತ್ನಿ ಶ್ರೀಮತಿ ರಾಜರಾಜೇಶ್ವರಿರಾವ್ ಅವರನ್ನು ಈ ಸಂದರ್ಭದಲ್ಲಿ ಶ್ರೀ ಪುತ್ತಿಗೆ ಸ್ವಾಮೀಜಿ ಅವರು ವಿಶೇಷ ಅನುಗ್ರಹ ಪ್ರಸಾದ, ಸ್ಮರಣಿಕೆ ನೀಡಿ ಗೌರವಿಸಿದರು.

## ಶ್ರೀ ಎಚ್.ಕೆ. ದಿವಾಕರ್‌ರವರಿಗೆ ಲಾಂಗ್ ಸರ್ವಿಸ್ ಪ್ರಶಸ್ತಿ



ಶ್ರೀ ಎಚ್.ಕೆ. ದಿವಾಕರ್‌ರವರು 17-3-1984ರಲ್ಲಿ L & T ಕಂಪನಿಯಲ್ಲಿ ಉದ್ಯೋಗಕ್ಕೆ ಸೇರಿದ್ದು, 25 ವರ್ಷಗಳ ಸೇವೆಯನ್ನು ಸಲ್ಲಿಸಿರುವ ವಿಶೇಷ ಸಂದರ್ಭದಲ್ಲಿ ಅವರಿಗೆ ಲಾಂಗ್ ಸರ್ವಿಸ್ ಅವಾರ್ಡ್‌ನ್ನು ಕಂಪನಿಯ ವತಿಯಿಂದ ನೀಡಿ ಗೌರವಿಸಲಾಯಿತು.

ಇವರು ಮುಲುಂದ್ ಕೈಗಾ, ಕೊಂಕಣ ರೈಲ್ವೇ, ಕಾಂಚೀಪುರಮ್, ಮೊದಲಾದ ಕಡೆ ಬೇರೆ ಬೇರೆ ಯೋಜನೆಗಳಲ್ಲಿ ಯಶಸ್ವಿಯಾಗಿ ಕೆಲಸ ನಿರ್ವಹಿಸಿರುವರು. ಮೆನೇಜರ್ ಹುದ್ದೆಯನ್ನು ನಿರ್ವಹಿಸುತ್ತಿದ್ದಾರೆ. ಇವರ ಪತ್ನಿ ಶ್ರೀಮತಿ ಪ್ರಶೀಲ ಹಾಗೂ ಸುಪುತ್ರಿ ದೀಪಿಂತಿ ಇವರ ಸಾಧನೆಗಾಗಿ ಶ್ರೀ ಶಾರದಾ ಅಭಿನಂದನೆಗಳು.

## ಅದಮ್ಯ ಕೃತಿ ಬಿಡುಗಡೆ



ಮಲಾರ್ ಜಯರಾಮ ರೈ ಸಂಪಾದಿಸಿರುವ ಕೃತಿ ಅದಮ್ಯವನ್ನು ಮಾಜಿ ಸಚಿವ ಎಚ್.ಕೆ. ಪಾಟೀಲ್ ಬಿಡುಗಡೆ ಗೊಳಿಸಿದರು. ಕೃತಿಯ ಸಂಪಾದಕ ಮಲಾರ್ ಜಯರಾಮ ರೈ ಅವರು, ವ್ಯಕ್ತಿಯೊರ್ವನ ಪ್ರತಿಭೆಯನ್ನು ಗುರುತಿಸಿ ಹೊರ ತಂದಾಗ ದೇಶದಲ್ಲಿ ಇಂತಹ ಅನೇಕ ಸಂಗತಿಗಳನ್ನು ಗುರುತಿಸಬಹುದು. ರಾಮಮೋಹನ್ ರಾವ್ ಅವರು ದಮನಿಸಲಾರದ ಅಗಾಧ ಚೈತನ್ಯವನ್ನು ಹೊಂದಿದ, ಪ್ರಧಾನಿಗಳಿಗೆ ಮೆದುಳಾಗಿ, ಮುಖವಾಗಿ ದೇಶದ ಆಗು ಹೋಗುಗಳನ್ನು ಪ್ರತಿನಿಧಿಸುತ್ತಿದ್ದ ವ್ಯಕ್ತಿಯಾಗಿದ್ದರು ಎಂದರು. ಹಿರಿಯ ಸಾಹಿತಿ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಬ್ಯಾಂಕ್‌ನ ನಾನ್ ಎಕ್ಸಿಕ್ಯೂಟಿವ್ ಚೇರ್‌ಮೆನ್ ಅನಂತಕೃಷ್ಣ ಭಟ್, ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಜಯರಾಮ ಭಟ್ ಅವರು ಮುಖ್ಯ ಅತಿಥಿಯಾಗಿ ಶುಭ ಹಾರೈಸಿದರು.

ಇನ್ನ ರಾಮಮೋಹನರಾವ್ ಹಾಗೂ ಅವರ ಪತ್ನಿ ಶ್ರೀಮತಿ ರಾಜೇಶ್ವರಿ ರಾವ್ ಅವರನ್ನು ಗೌರವಿಸಲಾಯಿತು. ಡಾ। ನಾ. ದಾಮೋದರ ಶೆಟ್ಟಿ ಸ್ವಾಗತಿಸಿದರು. ವಸಂತ ಶೆಟ್ಟಿ ಬೆಳ್ಳಾರೆ ಪ್ರಸ್ತಾವನೆಗೈದರು. ಅವನೀಂದ್ರನಾಥ್ ವಂದಿಸಿದರು. ಡಾ। ಆರ್. ನರಸಿಂಹ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

## 2010 - ಹೊಸ ವರ್ಷದ ಶುಭಾಶಯಗಳು

ನಮ್ಮ ಮೆಚ್ಚಿನ ಶ್ರೀಶಾರದಾ ಮಾಸ ಪತ್ರಿಕೆಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಯುವ ವೇದಿಕೆ, ಮಹಿಳಾ ವೇದಿಕೆ ಮತ್ತು ಇತರ ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಗ್ರಾಹಕರಿಗೆ, ಪತ್ರಿಕೆಗೆ ಆಕರ್ಷಕ ವಿನ್ಯಾಸ ಮೂಡಿಸಿ ಅಂದವಾಗಿ ಮುದ್ರಿಸಿದ ಶ್ರೀನಿಧಿ ಕಂಪ್ಯೂಟರ್ ಗ್ರಾಫಿಕ್ಸ್ ಮತ್ತು ಅಗ್ರಹಾರ ಆಫ್‌ಸೆಟ್ ಇವರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಜಕತ್ವವನ್ನು ನೀಡಿದ ಅಭಿಮಾನಿಗಳಿಗೆ ಮತ್ತು ಪ್ರೀತಿಯ ಓದುಗರಿಗೆ 2010-ಹೊಸ ವರ್ಷ ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದಿಯನ್ನು ತರಲಿ ಎಂದು ಹಾರೈಸುತ್ತೇವೆ.

**ಸಂಪಾದಕ ಮಂಡಳಿ**

## ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ - 576 102

ಶ್ರೀ ಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಹಾಗೂ ಪರಿಸರದ ಭಕ್ತಾಭಿಮಾನಿಗಳ ಅಪೇಕ್ಷೆಯಂತೆ ತಾ. 20-12-2009ನೇ ಆದಿತ್ಯವಾರ

**ಸಾಮೂಹಿಕ ಚಂಡಿಕಾಯಾಗ**ವು ನಡೆಯಲಿರುವುದು.

ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತ ಬಾಂಧವರೆಲ್ಲರೂ ಪಾಲ್ಗೊಂಡು ಶ್ರೀ ದುರ್ಗಾಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

★ ಚಂಡಿಕಾಯಾಗದ ಕರ್ತೃಗಳಾಗಲಿಚ್ಛಿಸುವವರು ದೇವಸ್ಥಾನದ ಅರ್ಚಕರ ಅಥವಾ ಶ್ರೀ ಶಾರದಾ ಮಂಟಪದ ಮ್ಯಾನೇಜರ್‌ರವರಲ್ಲಿ ರೂ 250/- ನ್ನು ನೀಡಿ ರಶೀದಿ ಪಡೆದುಕೊಳ್ಳಬೇಕಾಗಿ ವಿನಂತಿ.

★ ಯಾಗಕ್ಕೆ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ಗಂಧ, ಹತ್ತಿ ನೂಲಿನ ಅಥವಾ ರೇಷ್ಮೆಯ ರವಿಕೆ ಕಣ, ಸೀರೆ, ಯಾಗ ದ್ರವ್ಯಗಳು, ಸಮಿತ್ತು, ಪುಷ್ಪ, ತುಳಸಿ ತಂದಲ್ಲಿ ಯಾಗ ದೇವತೆಗೆ ಅರ್ಪಿಸುವ ಅವಕಾಶವಿದೆ.

★ ಸೇವಾ ಕರ್ತೃಗಳು ಬೆಳಿಗ್ಗೆ ಗಂಟೆ 8-00ಕ್ಕೆ ಯಾಗ ಸಂಕಲ್ಪಕ್ಕಾಗಿ ಉಪಸ್ಥಿತರಿರಬೇಕಾಗಿ ವಿನಂತಿ. ಗಂಟೆ 11-30ಕ್ಕೆ ಯಾಗದ ಪೂರ್ಣಾಹುತಿ ನಡೆಯಲಿದೆ.

ವಿ.ಸೂ.: ಕರ್ತೃಗಳಿಗೆ ಪ್ರತ್ಯೇಕವಾಗಿ ಯಾಗ ಪ್ರಸಾದ ನೀಡುವ ವ್ಯವಸ್ಥೆ ಇದೆ. (ರಶೀದಿ ತೋರಿಸಿ ಪಡೆದುಕೊಳ್ಳಬಹುದು) ಉಪಸ್ಥಿತಿ ಸಾಧ್ಯವಿಲ್ಲದ ಕರ್ತೃಗಳು ಮರುದಿನ ರಶೀದಿ ತೋರಿಸಿ ಶಾರದಾ ಮಂಟಪದ ಮ್ಯಾನೇಜರರಿಂದ ಪ್ರಸಾದ ಪಡೆದುಕೊಳ್ಳಬಹುದು.

-ಕಾರ್ಯದರ್ಶಿ

ಸಂಪಾದಕ ಮಂಡಳಿ

**ವೈ. ಮೋಹನ ರಾವ್**

**ಎಚ್.ಎನ್. ಶ್ಯಾನುಭಾಗ್**

**ಪ್ರಕಾಶ್ ರಾವ್ ಕೊಲ್ವೆ**

**ಟಿ. ಸುರೇಶ ರಾವ್ ನಿಟ್ಟೂರು**



**ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯ ಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ.**

**ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.**

**-ಸಂ.**


## ಚಿಂತನ

ಜೀವನದಲ್ಲಿ ಹೋಲಿಕೆಯನ್ನು ಮಾಡಿಕೊಳ್ಳುತ್ತಿರುವುದು ಸಹಜ ತಮ್ಮ ಬದುಕನ್ನು ಇತರರ ಬದುಕಿನೊಂದಿಗೆ ಹೋಲಿಕೆ, ತಮ್ಮ ಮಕ್ಕಳನ್ನು ಇತರರೊಂದಿಗೆ ಹೋಲಿಕೆ, ತಮ್ಮ ಬೆಳೆಯನ್ನು ಇತರರ ಬೆಳೆಯೊಂದಿಗೆ ಹೋಲಿಕೆ, ತಮ್ಮ ಅಂಕಗಳನ್ನು ಇತರರ ಅಂಕಗಳೊಂದಿಗೆ ಹೋಲಿಕೆ ತಮ್ಮ ಆಸ್ತಿ ಪಾಸ್ತಿಯನ್ನು ಇತರರ ಆಸ್ತಿಯೊಂದಿಗೆ ಹೋಲಿಕೆ ಮಾಡುವುದು ಸಾಮಾನ್ಯ ವಿಚಾರ.


ಈ ಹೋಲಿಕೆ ಮಾಡಿಕೊಳ್ಳುವಾಗ ನಾವು ನಮಗಿಂತ ಎತ್ತರದಲ್ಲಿರುವವರೊಂದಿಗೆ ಹೋಲಿಕೆ ಮಾಡಿಕೊಳ್ಳುತ್ತೇವೆ ವಿನಃ ಕೆಳಮಟ್ಟದಲ್ಲಿರುವವರೊಂದಿಗೆ ಅಲ್ಲ.

ಯಾವತ್ತೂ ನಾವು ನಮಗಿಂತ ಹೀನ ಸ್ಥಿತಿಯಲ್ಲಿದ್ದವರೊಂದಿಗೆ ಹೋಲಿಕೆ ಮಾಡಿಕೊಳ್ಳಬೇಕು. ಬಡವನು ದರಿದ್ರನೊಂದಿಗೂ, ಸೂರು ಇದ್ದವನು ಇಲ್ಲದವನೊಂದಿಗೂ, ರೋಗಿ ಹಲವು ರೋಗಗಳನ್ನು ಹೊತ್ತವನೊಂದಿಗೂ, ಕಲಿಕೆಯಲ್ಲಿ ದಡ್ಡನು ನಿರಕ್ಷರಿಯೊಂದಿಗೂ, ಸಾಮಾನ್ಯ ರೂಪವತಿಯರು ಕುರೂಪಿಯರೊಂದಿಗೂ ಹೋಲಿಕೆ ಮಾಡಿಕೊಳ್ಳಬೇಕು. ಹಾಗೆ ಹೋಲಿಕೆ ಮಾಡಿಕೊಂಡಾಗ ಮನಸ್ಸು ಸಮಾಧಾನ ಗೊಳ್ಳುವುದು. ಉನ್ನತ ಸ್ಥಾನದಲ್ಲಿದ್ದವರೊಂದಿಗೆ ಹೋಲಿಕೆ ಮಾಡಿಕೊಂಡರೆ ಆತನ ಮನಸ್ಸು ಕೆಡುವುದಲ್ಲದೆ ದುಷ್ಟ ಆಲೋಚನೆಗಳು ಆತನ ಮನದೊಳಕ್ಕೆ ಸೇರಿಕೊಳ್ಳುತ್ತವೆ. ಆ ಮೇಲ್ಮಟ್ಟವನ್ನು ತಾನು ಸಾಧಿಸಬೇಕೆಂದು ಕೆಟ್ಟ ಮಾರ್ಗವನ್ನು ತುಳಿಯುವವರೂ ಇದ್ದಾರೆ. ಇದರಿಂದ ಅವರ ಜೀವನವೇ ದುಃಖಮಯವಾದ ಅದೆಷ್ಟೋ ಘಟನೆಗಳನ್ನು ನಾವು ಇಂದು ನೋಡುತ್ತೇವೆ.

ಆದ್ದರಿಂದ ಹೋಲಿಕೆ ಯಾರೊಂದಿಗೆ ಇರಬೇಕೆಂಬ ವಿವೇಚನೆ ನಮಗೆ ಖಂಡಿತಾ ಇರಬೇಕು.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಕಾಳಿಯನ ವಿಷ ಎಷ್ಟು ಘೋರವಾಗಿತ್ತೆಂದರೆ ಯಮುನೆಯ ನೀರು ಕೊತ ಕೊತನೆ ಕುದಿಯುತ್ತಿತ್ತು.

ಶ್ರೀಕೃಷ್ಣನು ಧುಮುಕುವಾಗ ಅದು ಮತ್ತಷ್ಟು ಅಲ್ಲೋಲ ಕಲ್ಲೋಲವಾಯಿತು. ಬಾಲಗೋಪಾಲನು ಕೈಕಾಲುಗಳನ್ನು ಬಡಿದನು. ಇದರಿಂದುಂಟಾದ ನೀರಿನ ಕಂಪನದಿಂದ ಎಲ್ಲೋ ಮೂಲೆಯಲ್ಲಿ ಮಲಗಿದ್ದ ಕಾಳಿಯನಿಗೆ ಎಚ್ಚರವಾಗಿ ಸೋಜಿಗವೆನಿಸಿತು. ಯಾರೋ ತನ್ನನ್ನು ಧಿಕ್ಕರಿಸಿ ಯಮುನೆಯಲ್ಲಿ ಈಜುತ್ತಿರುವರೆಂದು ಅವನಿಗನಿಸಿತು. ಅವನು ವೇಗವಾಗಿ ಬಂದು ಕೃಷ್ಣನ ಮುಂದೆ ನಿಂತನು. ಅತ್ಯಂತ ಸುಂದರ ಬಾಲಕನನ್ನು ಕ್ಷಣಕಾಲ ಮೈಮರೆತು ನೋಡಿದನು. ಅವನು ಶ್ಯಾಮಲ ವರ್ಣದವನು. ಅವನೆದೆಯ ಮೇಲೆ ಶ್ರೀವತ್ಸ ಲಾಂಛನವಿತ್ತು. ಪೀತಾಂಬರನನ್ನುಟ್ಟಿದ್ದನು. ಅವನ ಪಾದಗಳು ಕಮಲ ಸುಂದರವಾಗಿದ್ದವು. ಮುಗುಳು ನಗುತ್ತಾ ನಿರ್ಭಯವಾಗಿ ನೀರಾಟವಾಡುತ್ತಿದ್ದ ಅವನನ್ನು ದಿಟ್ಟಿಸಿ ನೋಡಿದನು. ತನ್ನನ್ನು ಅವಗಣಿಸಿದ್ದನ್ನು ಕಂಡು ಅವನಿಗೆ ವಿಪರೀತ ಸಿಟ್ಟು ಬಂದಿತು. ಬಾಲಕನ ಮರ್ಮಕ್ಕೆ ಬಲವಾಗಿ ಕಚ್ಚಿ ಅವನ ಮೈಯನ್ನು ಹಗ್ಗದಂತೆ ಸುತ್ತಿ ಕಟ್ಟಿ ಹಾಕಿದನು. ಹೀಗೆ ನಾಗಬಂಧನಕ್ಕೊಳಗಾದ ತಮ್ಮ ಪ್ರಿಯ ಮಿತ್ರನು ನಿಶ್ಚೇಷ್ಟನಾದುದನ್ನು ನೋಡಿ ಗೋಪ ಬಾಲಕರು ದುಃಖ, ಭಯಗಳಿಂದ ಮೂರ್ಛೆ ಹೋದರು. ಹಸುಗಳೂ ವ್ಯಥೆಯಿಂದ ಕೂಗಲಾರಂಭಿಸಿದವು. ಇತ್ತ ವೃಂದಾವನದಲ್ಲೂ ಅಪಶಕುನಗಳು ಕಾಣಿಸಿಕೊಂಡವು. ಭೂಮಿ ನಡುಗಿತು. ಉಲ್ಕೆಗಳು ಕೆಳಗುರುಳಿದವು. ಗಂಡಸರ ಎಡ ಅಂಗಗಳು, ಹೆಂಗಸರ ಬಲ ಅಂಗಗಳು ಅದುರಿದವು. ನಂದನೇ ಮೊದಲಾದ ಗೋಪಾಲರು, ಯಶೋದೆಯೇ ಮುಂತಾದ ಗೋಪಸ್ತ್ರೀಯರು ಭಯದಿಂದ ಕಂಪಿಸಿದರು. ಬಾಲ ಮುಕುಂದನಿಗೇನೋ ಆಪತ್ತು ಬಂದಿರಬಹುದೆಂದು ಆತಂಕಗೊಂಡರು. ಆದರೆ ಬಲರಾಮನು ಸ್ವಯಂ ಅವತಾರ ಪುರುಷ ನಾಗಿದ್ದು ಕೃಷ್ಣನ ಮಹಿಮೆಯನ್ನು ಅರಿತವ ನಾದುದರಿಂದ ನಿಶ್ಚಿಂತೆಯಿಂದಿದ್ದನು.

ಅನಂತರ ವೃಂದಾವನವಾಸವಿಗಳೆಲ್ಲ ಕೃಷ್ಣನನ್ನು ಹುಡುಕಲು ಹೊರಟರು. ಯಶೋದಾನಂದನ ಶಂಖಚಕ್ರಾದಿ ಚಿಹ್ನೆಗಳುಳ್ಳ ಹೆಜ್ಜೆಗಳ ಜಾಡನ್ನು ಹಿಡಿದು ಅವರು ಯಮುನೆಯ ದಡವನ್ನು ತಲುಪಿದರು. ಅಲ್ಲಿ ಮೂರ್ಛೆಹೋಗಿ ಬಿದ್ದಿದ್ದ ಗೋಪಬಾಲರನ್ನೂ, ಅರಚುತ್ತಿದ್ದ ಹಸುಗಳನ್ನು ಕಂಡು ದಿಗ್ಭ್ರಾಂತರಾದರು. ದುಃಖದಿಂದ ಜೋರಾಗಿ ಆಕ್ರಂದನ ಮಾಡಿದರು. ಯಶೋದೆಯಂತು ತಾನು ಯಮುನೆಯ ಮಡುವಿಗೆ ಬಿದ್ದು ಸಾಯುವುದಾಗಿ ಹೇಳುತ್ತಾ ನದಿಯತ್ತ ಓಡತೊಡಗಿದಳು. ಆಗ ಗೊಲ್ಲತಿಯರೆಲ್ಲ ಅವಳನ್ನು ಬಲವಂತವಾಗಿ ಹಿಡಿದು ನಿಲ್ಲಿಸಿದರು.

ವ್ರಜವಾಸಿಗಳ ದೈನ್ಯ ಸ್ಥಿತಿಯಿಂದ ಕರುಣಾರ್ದ್ರನಾದ ಕೃಷ್ಣನಿಗೆ ತನ್ನನ್ನು ಬಿಟ್ಟರೆ ಇವರಿಗೆಲ್ಲ ಬೇರೆ ಗತಿಯಿಲ್ಲವೆಂದು ಅನಿಸಿ ತಾನು ಸರ್ಪಬಂಧದಿಂದ ಮುಕ್ತನಾಗಲು ನಿಶ್ಚಯಿಸಿದನು. ತನ್ನ ಮಹಿಮಾ ಸಿದ್ಧಿಯಿಂದ ಅವನು ತನ್ನ ಶರೀರವನ್ನು ಹಿಗ್ಗಿಸಲಾರಂಭಿ ಸಿದನು. ಅವನನ್ನು ಬಿಗಿಯಾಗಿ ಹಿಡಿದುಕೊಂಡಿದ್ದ ಕಾಲಿಯನಿಗೆ ತಾನು ತುಂಡಾಗಿ ಹೋಗಬಹು ದೆಂಬ ಆಶಂಕೆಯುಂಟಾಯಿತು. ಕೂಡಲೆ ಅವನು ಕೃಷ್ಣನನ್ನು ಬಿಟ್ಟುಬಿಟ್ಟು ದೂರಹೋಗಿ ನಿಂತನು. ಆದರೆ ಕೋಪದಿಂದ ತನ್ನ ನಾಲಿಗೆ ಗಳನ್ನು ಹೊರಚಾಚುತ್ತ ಒಳಗೆಳೆದುಕೊಳ್ಳುತ್ತ ಕೆಂಡದಂತಹ ಕಣ್ಣುಗಳಿಂದ ವಿಷದ ಜ್ವಾಲೆಗಳನ್ನು ಗುಳುತ್ತ ಕೃಷ್ಣನನ್ನೇ ನೋಡುತ್ತಿದ್ದನು. ಕೃಷ್ಣನೂ ಅವನ ಮೇಲೆ ಆಕ್ರಮಣ ಮಾಡಲು ಅವಕಾಶ ವನ್ನು ಕಾಯುತ್ತ ಅವನ ಸುತ್ತಲೂ ತಿರುಗುತ್ತಿದ್ದನು. ಕಾಳಿಯನೂ ಬಾಲಕೃಷ್ಣನನ್ನು ಹೆಡೆಗಳಿಂದ ಹೊಡೆದುರುಳಿಸುವ ಸಂಚು ಮಾಡುತ್ತ ಅವನೊಡನೆ ತಾನೂ ಇದ್ದಲ್ಲೇ ಸುತ್ತುತ್ತಿದ್ದನು. ಹೀಗೆ ತುಂಬ ಹೊತ್ತು ಕಳೆಯಿತು. ಕಾಳಿಯನ ಶಕ್ತಿ ಕುಂದಿತು. ಅವನು ಏದುಸಿರು ಬಿಡಲಾರಂಭಿಸಿದನು. ಇದೇ ಸರಿಯಾದ ಸಮಯವೆಂದು ಗೋವಿಂದನು ಅವನ ಹೆಡೆಯನ್ನು ಹಿಡಿದು ಛಂಗನೆ ಅವನ ತಲೆಯ ಮೇಲೆ ಜಿಗಿದು ನಿಂತನು. ಕಾಳಿಯನ ಹೆಡೆಗಳ ಮೇಲಿದ್ದ ಮಣಿಗಳ ಕಾಂತಿಯಿಂದ ಬಾಲ ಮುಕುಂದನ ಪಾದಕಮಲಗಳು ಥಳ ಥಳ ಹೊಳೆದವು. ಎಲ್ಲ ಕಲೆಗಳಿಗೂ ಗುರುವಾದ ಪರಮಾತ್ಮನು ಕಾಳಿಯನ ತಲೆಯ ಮೇಲೆ ನರ್ತಿಸಿದನು. ಅವನು ಹಾಗೆ ನರ್ತಿಸುವುದನ್ನು ನೋಡಿದ ಗಂಧರ್ವರು, ಸಿದ್ಧರು, ದೇವತೆಗಳು, ಚಾರಣರು, ದೇವಾಂಗನೆಯರು ಪ್ರೇಮಾದರ ಗಳಿಂದ ಮೃದಂಗಾದಿ ಮಂಗಳವಾದ್ಯಗಳನ್ನು ನುಡಿಸುತ್ತಾ ಪುಷ್ಪೋಪಹಾರಗಳನ್ನು ಹಿಡಿದು ಕೊಂಡು ಅಲ್ಲಿಗೆ ಬಂದರು. ಹಾಗೇ ಭಗವಂತ ನನ್ನು ಸ್ತುತಿಸಿದರು. ಕಾಳಿಯನು ತನ್ನ ನೂರೊಂದು ಹೆಡೆಗಳಲ್ಲಿ ಯಾವುದನ್ನು ಮೇಲೆತ್ತುತ್ತಿದ್ದನೋ ಅದನ್ನು ತುಳಿದು ಬಗ್ಗಿಸುತ್ತಿದ್ದನು ಬಾಲ ಮಾಧವ. ಹೀಗೆ ಭಗವಂತನು ಕುಣಿಯುತ್ತಿರಲು ಕಾಳಿಯನ ಜೀವ ಶಕ್ತಿ ಕುಸಿಯಿತು. ಅವನ ಮೂಗು ಬಾಯಿಗಳಿಂದ ರಕ್ತ ಹರಿಯತೊಡಗಿತು. ಕೊನೆಗೆ ನಿಶ್ಚೇಷ್ಟನಾದನು. ಪುನಃ ಎಚ್ಚರಗೊಂಡು ವಿಷಕಕ್ಕಿದನು. ಭಗವಂತನ ನೃತ್ಯದ ವೇಗ ಹೆಚ್ಚಾಯಿತು. ಇದರಿಂದ ತನ್ನ ಕೊನೆಯ ಗಳಿಗೆ ಬಂದೇ ಬಿಟ್ಟಿತೆಂದು ಅನಿಸಿ ಕಾಳಿಯನು ಜಗದ್ರಕ್ಷಕನಾದ ಪುರಾಣಪುರುಷನಿಗೆ ಮನದಲ್ಲೇ ಶರಣಾದನು. ಬಾಲಗೋಪಾಲನ ಈ ಅದ್ಭುತ ನೃತ್ಯದಿಂದ ಭಿನ್ನಭಿನ್ನವಾದ ಹೆಡೆಗಳುಳ್ಳ ಕಾಳಿಯನ ಹೆಂಡಂದಿರು ಭಕ್ತಿಯಿಂದ ಶ್ರೀಹರಿಗೆ ಶರಣೆಂದರು. ಬಾಲ ಮುಕುಂದನನ್ನು ಬಗೆಬಗೆಯಾಗಿ ಸ್ತೋತ್ರ ಮಾಡಿದರು. ತಮ್ಮ ಪತಿಯನ್ನು ಕ್ಷಮಿಸಿ, ಅವನನ್ನು ಉಳಿಸಬೇಕೆಂದು ಬೇಡಿಕೊಂಡರು. ದಯಾನಿಧಿಯಾದ ಶ್ರೀಕೃಷ್ಣನು ಅವನನ್ನು ಕ್ಷಮಿಸಿ ಹೋಗಲು ಬಿಟ್ಟನು. ಆಗ ಕಾಳಿಯನು ದೀನನಾಗಿ ಇಂತೆಂದನು–''ಭಗವಂತ, ನೀನೇ ಸೃಷ್ಟಿಸಿದ ಜೀವಿಗಳಲ್ಲವೇ ನಾವು? ನಾವು ತಮೋಗುಣರು. ಆದುದರಿಂದ ನಾವು ಮಾಡುವ ಕ್ರಿಯೆಗಳೆಲ್ಲ ಇತರರಿಗೆ ಅಪರಾಧ ವಾಗಿ ಕಾಣಿಸುತ್ತವೆ. ನಾವು ನಮ್ಮ ಸ್ವಭಾವಕ್ಕೆ ಅಧೀನರಲ್ಲವೇ, ದೇವ? ನೀನು ನಮ್ಮನ್ನು ನಿಗ್ರಹಿಸಲು, ಅನುಗ್ರಹಿಸಲು ಸ್ವತಂತ್ರನಲ್ಲವೇ? ನಾವಿನ್ನೇನು ಹೇಳಬಲ್ಲೆವು? ನೀನೆಲ್ಲವನ್ನೂ ಬಲ್ಲವನು''. ಆಗ ಜಗತ್ಪತಿಯಾದ ಪರಮಾತ್ಮ ನೆಂದನು, ''ನೀನು ನಿನ್ನ ಹೆಂಡತಿ ಮಕ್ಕಳ ಜೊತೆಯಲ್ಲಿ ಯಮುನಾ ನದಿಯನ್ನು ಬಿಟ್ಟು ಸಮುದ್ರಕ್ಕೆ ಹೋಗು. ಅಲ್ಲಿ ಸುಖವಾಗಿರು. ಈ ಯಮುನೆಯ ನೀರು ಸೇವಿಸಲು ಯೋಗ್ಯ ವಾಗಲಿ. ಯಾರು ಈ ಪ್ರಸಂಗವನ್ನು ಎರಡು ಸಂಧ್ಯೆಗಳಲ್ಲಿ ಸ್ಮರಿಸುತ್ತಾರೋ ಅವರಿಗೆ ಸರ್ಪ ಭಯವುಂಟಾಗದಿರಲಿ. ಹಾಗೆಯೇ ಈ ನದಿಯಲ್ಲಿ ಸ್ನಾನಮಾಡಿ ಪಿತೃಗಳಿಗೆ ತರ್ಪಣ ಕೊಡುವವರು ಪಾಪಗಳಿಂದ ಮುಕ್ತರಾಗಲಿ''. ಕಾಳಿಯನು ಶ್ರೀಕೃಷ್ಣನ ಆಜ್ಞೆಯಂತೆ ಯಮುನಾ ನದಿ ಯನ್ನು ಬಿಟ್ಟು ಸಪರಿವಾರನಾಗಿ ಸಮುದ್ರಕ್ಕೆ ಹೊರಟು ಹೋದನು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :** ಯಃ ಕಾರ್ಯಮ್ ನ ಪಶ್ಯತಿ ಸಹಃ ಅಂಧಃ।

ಅಂದರೆಯಾವನು ಕಾರ್ಯವನ್ನು ಕಾಣುವು ದಿಲ್ಲವೋ ಅವನು ಕುರುಡನೇ ಸರಿ.

ಪುಸ್ತಕ ಪರಿಚಯ : **ಅದಮ್ಯ (ಐ. ರಾಮಮೋಹನ್ ರಾವ್ - ವ್ಯಕ್ತಿ ಮತ್ತು ಸಾಧನೆ)**

**ಸಂ. ಮಲಾರ್ ಜಯರಾಮ ರೈ.**

ಪುಸ್ತಕದ ಮುನ್ನುಡಿಯಲ್ಲಿ ಕೇಂದ್ರ ಸರಕಾರದ ಸಚಿವರಾದ ಓಸ್ಕರ್ ಫೆರ್ನಾಂಡೀಸ್ ಅವರು ತಿಳಿಸಿದಂತೆ ''ರಾಮಮೋಹನರಾವ್ ಅವರು ಪ್ರಧಾನಿಗಳು ಮತ್ತು ರಾಷ್ಟ್ರನಾಯಕರು ಮಾತ್ರವಲ್ಲದೆ ಅಂತಾರಾಷ್ಟ್ರೀಯ ನಾಯಕರೊಂದಿಗೆ ಸಂವಹನ ಮಾಡುವ ವಿಶೇಷ ಸಾಮರ್ಥ್ಯವನ್ನು ಹೊಂದಿದವರು. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಯಾರೇ ಆದರೂ ಪ್ರಾಮಾಣಿಕರಲ್ಲದೇ ಹೋದರೆ ಬಹಳ ಕಾಲ ಉಳಿಯಲು ಸಾಧ್ಯವಿಲ್ಲ. ರಾವ್ ಅವರು ತಮ್ಮ ಪ್ರಾಮಾಣಿಕತೆ ಮತ್ತು ಇತರರಿಗೆ ನೆರವು ನೀಡುವ ವಿಶೇಷ ಗುಣಗಳಿಂದ ಸರಕಾರದ ಉನ್ನತ ಹುದ್ದೆಗಳಲ್ಲಿ ನಿರಂತರ ಸೇವೆ ಸಲ್ಲಿಸದರು.''

ಸಂಪಾದಕರಾದ ಮಲಾರ್ ಜಯರಾಮ ರೈ ಅವರು ತಿಳಿಸಿದಂತೆ - ''ಈ ಕೃತಿಯಲ್ಲಿ ರಾಮಮೋಹನ ರಾಯರ ಬದುಕು ಸಾಧನೆಗಳ ಚಿತ್ರಗಳಿವೆ....''

ಈ ಕಾರ್ಯದಲ್ಲಿ ಪ್ರಧಾನ ಪಾತ್ರ ವಹಿಸಿದ ಸಂಪಾದಕೀಯ ಬಳಗದ ಸಾಹಿತಿ, ಸಂಘಟಕ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಡಾ। ವಾಮನ ನಂದಾವರ, ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದ ಕೇಂದ್ರ ಸಚಿವಾಲಯ ಗ್ರಂಥಾಲಯದ ಅಧಿಕಾರಿ ವೈ. ಅವನೀಂದ್ರನಾಥ ರಾವ್ ಮತ್ತು ಶ್ರೀ ಬಾಲಕೃಷ್ಣ ನಾಯ್ಕ್ ಡಿ. ಇವರಿಗೆ ಬಹುಪಾಲು ಕೀರ್ತಿ ಸಲ್ಲಬೇಕು. ಹಲವು ಗಂಟೆಗಳ ಕಾಲ ನಮ್ಮೊಡನೆ ತಮ್ಮ ವೇಳೆಯನ್ನು ಕಳೆದು ಮಾಹಿತಿಯನ್ನು ನೀಡಿ ರಾಮಮೋಹನರಾಯರು ತಮ್ಮ ಪಕ್ವವಾದ ಜೀವನಾನುಭವದ ರಸಘಳಿಗೆಯನ್ನು ಉಣಬಡಿಸಿ ಈ ಕೃತಿಯ ಸ್ವಾದವನ್ನು ಹೆಚ್ಚಿಸಿದ್ದಾರೆ.''

''ಅದಮ್ಯ'' ದೆಹಲಿ ಮಿತ್ರದ ಐದನೆಯ ಕೃತಿ. ಮೇರು ವ್ಯಕ್ತಿತ್ವದ ಶ್ರೀ ವೈ. ರಾಮಮೋಹನ ರಾವ್ ಅವರ ಜೀವನ ಮತ್ತು ಸಾಧನೆಗಳ ಮಹತ್ವದ ಪುಸ್ತಕವನ್ನು ಅಭಿಮಾನದಿಂದ ಕನ್ನಡ ಜನತೆಗೆ ನೀಡುತ್ತಿದ್ದೇವೆ. ರಾಮಮೋಹನರಾವ್ ಅವರ ಬದುಕು ಮತ್ತು ಸಾಧನೆಗಳು ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿ ಎಂಬುದು ಈ ಕೃತಿಯ ಪ್ರಕಟಣೆಯ ಹಿಂದಿನ ಆಶಯ''

**- ವಸಂತ ಶೆಟ್ಟಿ ಬೆಳ್ಳಾರೆ** (ದೆಹಲಿ ಮಿತ್ರ)

ವೈ. ಅವನೀಂದ್ರನಾಥರಾವ್ ಅವರ ಆತ್ಮೀಯ ಬಂಧು ಲೇಖನದ ಸಾಲುಗಳು ಹೀಗಿವೆ.

''ನನಗೆ ಅಚ್ಚರಿಯಾಗಿ ಕಾಣುವುದು ರಾವ್ ಅವರ ಸರಳತೆ. ಮೇರು ವ್ಯಕ್ತಿತ್ವದ ವ್ಯಕ್ತಿಯೊಬ್ಬರು ಅತ್ಯಂತ ಸರಳವಾಗಿ ಮತ್ತು ಸ್ನೇಹಪರವಾಗಿ ಬೆರೆಯುವ ಗುಣ ನಮಗೆಲ್ಲಾ ಆದರ್ಶ. ತಮ್ಮ ಬಿರುಸಿನ ಚಟುವಟಿಕೆಯ ನಡುವೆಯೂ ಅವರ ಅಪಾರ ಕನ್ನಡಪ್ರೇಮ ಬತ್ತಿಹೋಗದೆ ಇರುವುದು ಸೋಜಿಗ. ದೆಹಲಿ ಕರ್ನಾಟಕ ಸಂಘದಲ್ಲಿನ ಬೆಳವಣಿಗೆಗೆ ಅವರ ಕೊಡುಗೆಗಳು. ಇನ್ನೊಂದು ಅಧ್ಯಾಯವಾಗಬಹುದು. ಎಪ್ಪತ್ತೈದರ ವಯಸ್ಸಿನಲ್ಲೂ ಕಾಣುವ ಅವರ ಈ ಕೃತಿಯು ಅದಮ್ಯ ಉತ್ಸಾಹ ಮತ್ತು ಒಳಗಿನ ಚೇತನ ಏನಿರಬಹುದು ಎಂಬುದು ನನಗೆಸದಾ ಕುತೂಹಲ ನೀಡುವ ಸಂಗತಿ.' '

**- ವೈ. ಮೋಹನ ರಾವ್**


ಶ್ರೀಶಾರದಾ ವೇದಿಕೆಯ ಮಹಾ ಪೋಷಕರು : **ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ**

# ಶಿವಬ್ರಾಹ್ಮಣ ಸಭಾ ಕಾಸರಗೋಡು



ಕಾಸರಗೋಡಿನ ಡಾ। ಶಂಕರರಾಜ್‌ರ ಮನೆಯಲ್ಲಿ 10-02-2002ರಂದು ಸೇರಿದ್ದ ಸಭೆಯಲ್ಲಿ ಈ ಸಂಘಟನೆಯ ಮಹಿಳಾ ಕಾರ್ಯಕರ್ತೆಯರು ಒಗ್ಗೂಡಿ ಮಹಿಳಾ ಘಟಕವನ್ನು ರೂಪೀಕರಿಸಿದರು. ಮುಂದೆ ಈ ಮಹಿಳಾ ಘಟಕವು ಅನೇಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಮಾಜಕ್ಕೆ ತಮ್ಮ ಕೊಡುಗೆಯನ್ನಿತ್ತಿತು.

ಕುಮಾರಿ ಅಕ್ಷತಾ ದಿನೇಶ್‌ರಾವ್ ಅಡೂರುರವರ ನೇತೃತ್ವದಲ್ಲಿ ಕರಕುಶಲಕಲಾ ವಸ್ತುಗಳನ್ನು ಮಾಡುವ ಶಿಬಿರವನ್ನು ಆಲಂಪಾಡಿ ಸುಕುಮಾರನವರ ಮನೆಯಲ್ಲಿ ಏರ್ಪಡಿಸಲಾಯಿತು. ಸಮಾಜ ಬಾಂಧವರಿಗಾಗಿ ಶ್ರೀಮತಿ ರಾಧಾ ಮುರಳೀಧರ್ ಮತ್ತು ಶ್ರೀಮತಿ ರಾಜೇಶ್ವರಿ ಶುಭಕರ್‌ರವರು ಉಚಿತ ಸಂಗೀತ ತರಬೇತಿ ಕಾರ್ಯಕ್ರಮವನ್ನು ಆರಂಭಿಸಿದರು. ಕೆಲವು ಪ್ರವಾಸ ತಾಣಗಳಿಗೂ ಭೇಟಿಕೊಟ್ಟು ಘಟಕವನ್ನು ಮುನ್ನಡೆಸುವತ್ತ ಸಾಗಿದರು. ಶ್ರೀಮತಿ ರಮಾ ಭಾಸ್ಕರರವರ ಕುಶಲಕಲೆಯೂ ಸಮಾವೇಶ ಸಂದರ್ಭದಲ್ಲಿ ವಿಜೃಂಭಿಸಿದ್ದನ್ನು ನೆನಪು ಮಾಡಿಕೊಳ್ಳುತ್ತಿದ್ದೇವೆ.

ಮಹಿಳಾ ಘಟಕವು ಪ್ರತಿ ವಾರ್ಷಿಕ ಅಧಿವೇಶನದ ಸಂದರ್ಭಗಳಲ್ಲಿ ಮನೋರಂಜನಾ ಕಾರ್ಯಕ್ರಮಗಳೊಂದಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ನಡೆಸಿ ಬಹುಮಾನ ವಿತರಣೆ ಮಾಡುತ್ತಿದೆ. ಪ್ರತಿ ವರ್ಷವೂ ಶ್ರಾವಣ ಮಾಸದಲ್ಲಿ ಶ್ರಾವಣ ಶುಕ್ರವಾರ ಪೂಜಾ ಕಾರ್ಯಕ್ರಮವನ್ನು ಸದಸ್ಯೆಯರ ಮನೆಗಳಲ್ಲಿ ನಡೆಸುತ್ತಾ ಬಂದಿರುತ್ತಾರೆ. ಸಭಾದ ಎಲ್ಲಾ ಕಾರ್ಯಕ್ರಮದಲ್ಲಿ ಎಲ್ಲಾ ಮಾಸಿಕ ಸಭೆಯಲ್ಲೂ ಸದಸ್ಯೆಯರು ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಸಹಕಾರ ಕೊಡುತ್ತಾ ಗೀತಾ ಗಾಯನದ ಮೂಲಕ ಪ್ರತಿ ಸಭೆಗಳಲ್ಲಿಯೂ ರಂಜಿಸುತ್ತಾ ಬಂದಿರುತ್ತಾರೆ. ವಿಶೇಷವಾಗಿ ಪ್ರತಿಯೊಂದು ಸಮಾವೇಶ ಸಂದರ್ಭದಲ್ಲಿ ಆಕರ್ಷಕವಾದ ಹೂವಿನ ರಂಗವಲ್ಲಿ ಶ್ರೀಮತಿ ಪ್ರಭಾ ರಮೇಶರವರ ನೇತೃತ್ವದಲ್ಲಿ ಇತರ ಸದಸ್ಯರ ಸಹಕಾರದೊಂದಿಗೆ ಸೃಷ್ಟಿಸಲ್ಪಡುತ್ತಿತ್ತು.

ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಮಾಲತಿ ಜಗದೀಶ್, ಉಪಾಧ್ಯಕ್ಷೆ ಶ್ರೀಮತಿ ರಾಜೇಶ್ವರಿ ಶುಭಕರ್, ವಿಜಯಲಕ್ಷ್ಮೀ ಶ್ಯಾನುಭಾಗ್, ಡಾ। ಮಧುಬಾಲ ಪಿ.ರಾವ್, ಕಾರ್ಯದರ್ಶಿ ಶ್ರೀಮತಿ ಕೃಪಾ ಶ್ಯಾನುಭಾಗ್, ಜತೆ ಕಾರ್ಯದರ್ಶಿ ಶ್ರೀಮತಿ ಸುಮಂಗಲ ಮನೋಹರ್, ಕೋಶಾಧಿಕಾರಿ ಶ್ರೀಮತಿ ಪ್ರಭಾ ರಮೇಶ್, ಸದಸ್ಯೆಯರು ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ, ಸುಜ್ಞಾನಿ ಶ್ಯಾನುಭಾಗ್, ಡಾ। ಗೀತ ಸತ್ಯನಾಥ್, ಚಂದ್ರಮತಿ ಶ್ಯಾನುಭಾಗ್, ನಯನ ರಾಜ್, ಮೋಹಿನಿ ಶ್ಯಾನುಭಾಗ್, ಅನ್ನಪೂರ್ಣ ಆಲಂಪಾಡಿ, ಪ್ರತಿಮಾ ವಿನೋದ್, ಶಶಿರೇಖ ಶ್ರೀನಾಥ್, ರಾಧಾ ಮುರಳೀಧರ್, ಸದಾರಮ ಜಿ. ರಾವ್, ವೀಣಾ ಪ್ರಸನ್ನ, ಸತಿದೇವಿ ಅರವಿಂದ, ಜಯಶ್ರೀ ವಸಂತರಾಜ್, ಸರಸ್ವತಿ ಕೃಷ್ಣಯ್ಯ.



ಕಾಸರಗೋಡಿನ ಶಿವ ಬ್ರಾಹ್ಮಣ ಸಭಾದ ವಾರ್ಷಿಕ ಸಭೆಯ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪುಟಾಣಿಗಳಿಂದ ಪ್ರಾರ್ಥನೆ, ಭಾವಗೀತೆ, ಶ್ಲೋಕ, ದೇವತಾಸ್ತುತಿ, ಮಿಮಿಕ್ರಿ, ಶಾಸ್ತ್ರೀಯ ನೃತ್ಯ ಮನ ರಂಜಿಸಿತು. ಮಹಿಳೆಯರ ವಿವಿಧ ವಿನೋದಾವಳಿಗಳಲ್ಲಿ ಕೋಲಾಟದ ತಂಡ ವಿಶೇಷ ಮೆರುಗನ್ನು ನೀಡಿತು.

# ಕನ್ನಡದ ತುತ್ತೂರಿ : ಪುಸ್ತಕ ಬಿಡುಗಡೆ ಸಮಾರಂಭ



ದಿನಾಂಕ 14-11-2009ರಂದು ಬೆಳಿಗ್ಗೆ 10-30ಕ್ಕೆ ಶಿವಮೊಗ್ಗ ನಗರದ ಸಹ್ಯಾದ್ರಿ ಪ್ರೌಢಶಾಲೆಯ ಸಭಾಂಗಣದಲ್ಲಿ ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ ಎಂ.ಎ. ಶಿವಮೊಗ್ಗ ಇವರು ಬರೆದ 17ನೇಯ ಕೃತಿ ಕನ್ನಡದ ತುತ್ತೂರಿ (ಮಕ್ಕಳ ಕವನ ಸಂಕಲನ) ಕೃತಿಯನ್ನು ಶ್ರೀ ಎಂ.ಸಿ. ಗಂಗಾಧರ, ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಶಿವಮೊಗ್ಗ ಇವರು ಬಿಡುಗಡೆ ಮಾಡಿದರು. ಶ್ರೀ ಮಾರ್ಪಳ್ಳಿ ಆರ್. ಮಂಜುನಾಥರವರು ಮಕ್ಕಳ ಪರಾಕಾಯ ಪ್ರವೇಶ ಮಾಡಿ ಮಗುವಿನ ಕಣ್ಣಿನಿಂದ ಸುತ್ತಲ ಜಗತ್ತನ್ನು ನೋಡಿ ರಚಿಸಿದ ಕವನಗಳು ಈ ಕೃತಿಯಲ್ಲಿದೆಯೆಂದು ತಿಳಿಸಿ, ಇವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಶ್ರೀ ಡಿ. ಮಂಜುನಾಥ, ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಶಿವಮೊಗ್ಗ ಇವರು ಕನ್ನಡದ ತುತ್ತೂರಿಯಲ್ಲಿ ಬಹು ಸುಂದರ, ಚಂದದ ಕವನಗಳಿವೆಯೆಂದು ತಿಳಿಸಿ ಮಕ್ಕಳ ಸಾಹಿತ್ಯದ ಬಗ್ಗೆ ಒಲವನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಲೇಖಕ ಮಾರ್ಪಳ್ಳಿ ಆರ್. ಮಂಜುನಾಥರವರು ಮಕ್ಕಳ ಸಾಹಿತ್ಯದ ಬಗ್ಗೆ ಪತ್ರಿಕೆಯವರಿಂದಾಗಲೀ, ವಿಮರ್ಶಕರಿಂದಾಗಲೀ ಸರಿಯಾದ ಪ್ರತಿಕ್ರಿಯೆ ಬರುತ್ತಿಲ್ಲವೆಂದು ಹಿರಿಯ ಮಕ್ಕಳ ಬಗ್ಗೆ ಬರೆಯುವ ಕವನಗಳನ್ನು ಸಹ ಗಮನಿಸಬೇಕೆಂದು ಹಾಗೂ ಮಕ್ಕಳ ಸಾಹಿತ್ಯದಲ್ಲಿ ಆರೋಗ್ಯಕರ ಪ್ರಯೋಗಗಳನ್ನು ನಡೆಸುವ ಅಗತ್ಯವಿದೆಯೆಂದು ಈ ಬಗ್ಗೆ ಮಕ್ಕಳು ಸಹ ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಂಡು ಮಕ್ಕಳ ಸಾಹಿತ್ಯವನ್ನು ಸಮೃದಿಗೊಳಿಸಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀನಿಧಿ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಕಡಿದಾಳ್ ಗೋಪಾಲ್‌ರವರು ಮತ್ತು ಮುಖ್ಯೋಪಾಧ್ಯಾಯರಾದ ಶ್ರೀ ಟಿ.ಪಿ. ನಾಗರಾಜ್‌ರವರು ಮಾರ್ಪಳ್ಳಿ ಆರ್. ಮಂಜುನಾಥರ ಕೃತಿಯ ಬಗ್ಗೆ ಮಾತನಾಡಿ ಶುಭ ಹಾರೈಸಿದರು. ಈ ಕಾರ್ಯಕ್ರಮವನ್ನು ಶ್ರೀ ಮಹಾಗಣಪತಿ ಪ್ರಕಾಶನ ಮತ್ತು ಸಹ್ಯಾದ್ರಿ ಪ್ರೌಢಶಾಲೆಯವರು ಸಂಯುಕ್ತವಾಗಿ ಮಕ್ಕಳ ದಿನಾಚರಣೆಯ ಪ್ರಯುಕ್ತ ಏರ್ಪಡಿಸಿದ್ದರು. ಶ್ರೀಮತಿ ಗಿರಿಜಾಸತ್ಯನಾರಾಯಣ್ ಇವರು ಪ್ರಾರ್ಥನೆಯೊಂದಿಗೆ ಈ ಲೇಖಕರ ಕವನಗಳನ್ನು ಹಾಡಿ ರಂಜಿಸಿದರು. ಪ್ರಮೋದ ಮಾರ್ಪಳ್ಳಿ ವಂದನಾರ್ಪಣೆ ಸಲ್ಲಿಸಿದರು. ವಿದ್ಯಾರ್ಥಿನಿ ಕು। ಶರಣ್ಯ ಕಾರ್ಯಕ್ರಮ ನಿರೂಪಿಸಿದರು.

**ವರದಿ : ಮಂಜುಳ, ಶಿವಮೊಗ್ಗ**

ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

ಸಾಮೂಹಿಕ ಗಣಹೋಮವು

ತಾ.3-1-2010ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

**ಜನವರಿ ತಿಂಗಳಲ್ಲಿ**

**ತಾ.9-1-2010ರ ಶನಿವಾರ**

ಸಂಜೆ ಗಂಟೆ 5-00ರಿಂದ

ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ **ನೀಲಾವರ ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಉಡುಪಿ ವಿಶಿಷ್ಟ ರುಚಿಯುಳ್ಳ
Rao's 'ಮಾತೃಛಾಯಾ'ರವರ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444

PRAMOD
AUTOMOBILES
KARANGALPADY, MANGALORE -575 003.
Ph : 2491723 (O)
2493633 (H.O.)
2212723 (R)
Prop. :Ln.K. HARSHA KUMAR

# ಥ್ಯಾಲ್ಯಾಂಡ್, ಮಲೇಶಿಯಾ, ಸಿಂಗಾಪೂರ್ ಪ್ರವಾಸ ಕಥನ

**- ಶ್ರೀಮತಿ ಮಹಾಲಕ್ಷ್ಮೀ ಶ್ಯಾನುಭಾಗ್,**
ಅಂಬಲಪಾಡಿ

ನಾವು ಇದೇ ಅಕ್ಟೋಬರ್‌ನಲ್ಲಿ ಥ್ಯಾಲ್ಯಾಂಡ್, ಮಲೇಶೀಯಾ, ಸಿಂಗಾಪೂರ್ ಪ್ರವಾಸಕ್ಕಾಗಿ ನಿರ್ಮಲಾ ಟ್ರಾವೆಲ್ಸ್‌ನ ಸಹಸಂಸ್ಥೆಯಾದ 'ವಾಟಿಕಾ ಇಂಟರ್‌ನ್ಯಾಶನಲ್ ಟ್ರಾವೆಲ್ಸ್'ನಲ್ಲಿ ಟಿಕೇಟ್ ಬುಕ್ ಮಾಡಿದ್ದೆವು. ಈ ಪ್ರವಾಸವು ನವೆಂಬರ್ 2ನೇ ತಾರೀಕು ಬೆಂಗಳೂರಿನಿಂದ ಪ್ರಾರಂಭವಾಗಿ 14ನೇ ತಾರೀಕು ಕೊನೆಗೊಳ್ಳುವುದೆಂದು ಟ್ರಾವೆಲ್ಸ್‌ನವರು ಪತ್ರ ಬರೆದು ತಿಳಿಸಿದರು. ಅದರಂತೆ ನಾವು 2ನೇ ತಾರೀಕು ರಾತ್ರಿ 8-00 ಗಂಟೆಗೆ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದು ಸೇರಿದೆವು. ಉಡುಪಿ, ಮಂಗಳೂರು, ಮೈಸೂರು, ಬೆಂಗಳೂರಿನಿಂದ ಇನ್ನೂ 20 ಜನ ಈ ಪ್ರವಾಸಕ್ಕೆ ನಮ್ಮ ಜತೆ ಬರುವವರಿದ್ದರು. ಟೂರ್ ಮೆನೇಜರ್ ಹಾಗೂ ಅವರೆಲ್ಲಾ ನಮಗಿಂತ ಮೊದಲೇ ವಿಮಾನ ನಿಲ್ದಾಣದಲ್ಲಿ ಹಾಜರಿದ್ದರು.

ವಿಮಾನ ನಿಲ್ದಾಣದ ನಿಯಮದಂತೆ ಪಾಸ್‌ಪೋರ್ಟ್, ವೀಸಾ ಮತ್ತು ಟಿಕೇಟ್‌ಗಳನ್ನು ಪರಿಶೀಲಿಸಿದ ಮೇಲೆ ''ಸಿಂಗಾಪುರ ಏರ್‌ಲೈನ್ಸ್'' ವಿಮಾನದಲ್ಲಿ ಬೆಂಗಳೂರಿನಿಂದ ಸಿಂಗಾಪೂರಕ್ಕೆ ರಾತ್ರಿ 11-10ಕ್ಕೆ ಹೊರಟೆವು. ಸಿಂಗಾಪುರ ಏರ್‌ಲೈನ್ಸ್‌ನ ಬೃಹದಾಕಾರದ ವಿಮಾನದಲ್ಲಿನ ಪ್ರಯಾಣವು ತುಂಬಾ ಸ್ಮರಣೀಯ ಹಾಗೂ ರೋಮಂಚಕರ ಅನುಭವ. ಪ್ರಯಾಣದ ನಡುವೆ ಆ ಮಧ್ಯರಾತ್ರಿಯಲ್ಲಿಯೂ ತಂಪು ಪಾನೀಯ ಹಾಗೂ ಊಟದ ವ್ಯವಸ್ಥೆಯೂ ಇತ್ತು. ಸುಮಾರು $4^1/_2$ ಗಂಟೆಗಳ ಹಾರಾಟದ ಬಳಿಕ ವಿಮಾನವು ಸಿಂಗಾಪುರದ 'ಚಾಂಗಿ' ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಅಲ್ಲಿಯ ಸಮಯವು ಇಲ್ಲಿಯ ಸಮಯಕ್ಕಿಂತ $2^1/_2$ ಗಂಟೆಗಳಷ್ಟು ಮುಂದಿರುವುದರಿಂದ ಸಿಂಗಾಪುರ ತಲುಪಿದಾಗ ಬೆಳಗಿನ ಜಾವ 5-30 ಗಂಟೆಯಾಗಿತ್ತು.

'ಚಾಂಗಿ' ವಿಮಾನ ನಿಲ್ದಾಣದಿಂದ ಕೂಡಲೇ ನಾವು ಥ್ಯಾಲ್ಯಾಂಡ್‌ನ ರಾಜಧಾನಿಯಾದ ಬ್ಯಾಂಕಾಕ್‌ಗೆ ಪ್ರಯಾಣ ಬೆಳೆಸಬೇಕಾಗಿತ್ತು. ಒಂದು ಗಂಟೆಯ ಅವಧಿಯೊಳಗೆ ಮತ್ತೆ ಟರ್ಮಿನಲ್ ಬದಲಾಯಿಸಿ ನಿಲ್ದಾಣದ ಇತರ ವಿಧಿ ವಿಧಾನಗಳನ್ನು ಪೂರೈಸಿ ಬ್ಯಾಂಕಾಕ್‌ಗೆ ಹೋಗುವುದಕ್ಕಾಗಿ ಸಿಂಗಾಪುರ ಏರ್‌ಲೈನ್ಸ್‌ನ ಇನ್ನೊಂದು ವಿಮಾನವನ್ನು ಏರಿದೆವು. ಸುಮಾರು ಎರಡು ತಾಸುಗಳ ಪ್ರಯಾಣದ ಬಳಿಕ ಬ್ಯಾಂಕಾಕ್‌ನ ''ಸುವರ್ಣಭೂಮಿ'' ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದೆವು. ಈ ವಿಮಾನ ನಿಲ್ದಾಣವೂ ವಿಶಾಲತೆ ಹಾಗೂ ಸೌಕರ್ಯಗಳಲ್ಲಿ ಸಿಂಗಾಪುರದ ವಿಮಾನ ನಿಲ್ದಾಣಕ್ಕೆ ಸರಿಸಮವಾಗಿದೆ. ಈ ನಿಲ್ದಾಣದಲ್ಲಿ ನಮ್ಮ ಪುರಾಣದ ಸಮುದ್ರ ಮಥನದ ಸುಂದರ ಚಿತ್ರಣ ಇದೆ. ಇದರಲ್ಲಿ ಮಂದಾರ ಪರ್ವತ, ಅದಕ್ಕೆ ಸುತ್ತಿದ ವಾಸುಕಿ ಸರ್ಪ, ಕಡೆಯುತ್ತಿರುವ ಸುರರು ಹಾಗೂ ಅಸುರರು, ಸಮುದ್ರದಿಂದ ಹೊರಗೆ ಬರುವ ಹಾಲಾಹಲ, ಶಂಖ, ಐರಾವತ, ಸಮುದ್ರದ ಒಳಗೆ ಇರುವ ಜಲಚರ ಪ್ರಾಣಿ ಇತ್ಯಾದಿಗಳ ಪ್ರತಿಮೆಗಳು ಆಕರ್ಷಕವಾಗಿದೆ. ವಿಮಾನ ನಿಲ್ದಾಣಕ್ಕೆ ಭೇಟಿಕೊಡುವ ಪ್ರತಿಯೊಬ್ಬನೂ ತಿರುತಿರುಗಿ ನೋಡಲೇಬೇಕಾದ ಸುಂದರ ದೃಶ್ಯವಿದು.

ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ ತಿರುಗಾಡಲು ಟೂರಿಸ್ಟ್ ಸಂಸ್ಥೆಯವರು ಬಸ್ಸೊಂದನ್ನು ಕಳಿಸಿಕೊಟ್ಟಿದ್ದರು. ಬಸ್ಸಿನೊಂದಿಗೆ ಅಲ್ಲಿಯ 'ನೇನಾ' ಎಂಬ ಸ್ಥಳೀಯ ಮಹಿಳಾ ಟೂರಿಸ್ಟ್‌ಗೈಡ್ ಕೂಡಾ ಬಂದಿದ್ದಳು. ನಮ್ಮ ಹವಾನಿಯಂತ್ರಿತ ಟೂರಿಸ್ಟ್ ಬಸ್ ವಿಶಾಲವಾಗಿದ್ದು ಕೆಳಗಿನ ಅಂತಸ್ತಿನಲ್ಲಿ ಸಾಮಾನುಗಳನ್ನು ಇಡಲು ಹಾಗೂ ಮೇಲಿನ ಅಂತಸ್ತಿನಲ್ಲಿ ಪ್ರಯಾಣಿಕರು ಆರಾಮವಾಗಿ ಕುಳಿತುಕೊಂಡು ಹೊರಗಿನ ದೃಶ್ಯಗಳನ್ನು ನೋಡುವ ವ್ಯವಸ್ಥೆ ಇತ್ತು. ಟೂರಿಸ್ಟ್ ಗೈಡ್ ತುಂಬಾ ಅನುಭವಿಯಾಗಿದ್ದು ಅವಳಿಗೆ ಇಡೀ ದೇಶದ ಅಂಕಿಅಂಶಗಳು ಬಾಯಿಪಾಠವಿದ್ದು ಇಂಗ್ಲೀಷ್‌ನಲ್ಲಿ ನಿರರ್ಗಳವಾಗಿ ತನ್ನ ದೇಶದ ಸಾಧನೆಗಳ ಬಗ್ಗೆ ವಿವರಿಸಿದಳು.

ಥ್ಯಾಲ್ಯಾಂಡ್ ಹಲವು ವರ್ಷಗಳ ಹಿಂದೆ ವಿಯಟ್ನಾಂನಂತೆ ಬಡರಾಷ್ಟ್ರವಾಗಿದ್ದರೂ ಅಲ್ಲಿಯ ಜನರು ತಮ್ಮ ಮನೋಸ್ಥೈರ್ಯ, ಆತ್ಮವಿಶ್ವಾಸ ಹಾಗೂ ಕಠಿಣ ಪರಿಶ್ರಮಗಳಿಂದ ವಿಶಾಲವಾದ ಸುಸಜ್ಜಿತ ವಿಮಾನ ನಿಲ್ದಾಣ, ಅಗಲವಾದ ಹಾಗೂ ಸ್ವಚ್ಛವಾದ ರಸ್ತೆಗಳು, ಗಗನಚುಂಬಿ

(5ನೇ ಪುಟಕ್ಕೆ)


# ಈಶಾವಾಸ್ಯಂ ವೇದಾಧ್ಯಯನ
## ಸಂಚಾರಿ ಗುರುಕುಲ, ಬೆಂಗಳೂರು

**ಓಂ ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯ ಸ್ವಿದ್ಧನಮ್ ॥**
**(ಗುರುಕುಲ ಪ್ರಾರ್ಥನಾ ಮಂತ್ರಾಃ)**

**ಪಾಠ ಪಟ್ಟಿ**

**ಪ್ರಥಮ ವರ್ಷ**
1. ಶ್ರೀ ಗುರುಮಂತ್ರಾಃ
2. ಶ್ರೀ ಗಣಪತಿ ಮಂತ್ರಾಃ
3. ಶ್ರೀ ಗಾಯತ್ರಿ ಮಂತ್ರಾಃ
4. ಶ್ರೀ ಸರಸ್ವತಿ ಮಂತ್ರಾಃ
5. ಶಾಂತಿ ಮಂತ್ರಾಃ

ಕೃಷ್ಣಯಜುರ್ವೇದ
6. ಪುರುಷ ಸೂಕ್ತಮ್
7. ನಾರಾಯಣ ಸೂಕ್ತಮ್
8. ಶ್ರೀ ಸೂಕ್ತಮ್
9. ಶ್ರೀ ದುರ್ಗಾಸೂಕ್ತಮ್
10. ಶ್ರೀ ರುದ್ರಪ್ರಶ್ನಃ ಲಘುನ್ಯಾಸಃ
11. ಶ್ರೀ ರುದ್ರಪ್ರಶ್ನಃ
12. ಶ್ರೀ ಚಮಕ ಪ್ರಶ್ನಃ
13. ಶಿವೋಪಾಸನ ಮಂತ್ರಾಃ

ಮಂತ್ರಪುಷ್ಪಮ್
14. ಯೋಪಾಂಪುಷ್ಪಃವೇದ (ಅರುಣಪ್ರಶ್ನಃ)
15. ಬ್ರಹ್ಮನಿತ್ಯಾನುವಾಕ
16. ತ್ವಮಗ್ನೇ ಶತರುದ್ರೀಯಂ ಅಸ್ತಮ್
17 ಗಣೇಶಾಥರ್ವಶೀರ್ಷಮ್ (ಅಥರ್ವಣವೇದ)
18. ತ್ರಿಸುಪರ್ಣ ಮಂತ್ರಾಃ
19. ಚೂರ್ಣಿಕಾಭಾಗ

**ದ್ವಿತೀಯ ವರ್ಷ**
20. ಈಶಾವಾಸ್ಯೋಪನಿಷತ್ (ಶುಕ್ಲಯಜುರ್ವೇದ)

ಋಗ್ವೇದ
21. ವೇದಾದಿಮಂತ್ರಾಃ (ಅಗ್ನಿಮೀಳೇಸೂಕ್ತಮ್ 1)
22. ಸ್ವಸ್ತಿನೋಮಿಮೀತಾ ಸೂಕ್ತಮ್
23. ಶ್ರೀ ಗಣೇಶಸೂಕ್ತಮ್
24. ಶ್ರೀ ದೇವೀ ಸೂಕ್ತಮ್
25. ಮಂತ್ರಾಕ್ಷತ ಮಂತ್ರಾಃ
26. ಅಷ್ಟಾವಧಾನ ಸೇವೆ
27. ಘನಪಾಠ
28. ಸಾಮಗಾನ

**ತೃತೀಯ ವರ್ಷ**
29. ಅಥದುರ್ಗಾಸಪ್ತಶತೀ
30. ಸಸ್ವರ ಮಹಾನ್ಯಾಸಾದಿಮಂತ್ರಾಃ
31. ಪವಮಾನ ಸೂಕ್ತಮ್

ವೇದ ಗ್ರಂಥಗಳು
1. ಸಸ್ವರ ವೇದಮಂತ್ರಾಃ (ಶ್ರೀ ರಾಮಕೃಷ್ಣ ಆಶ್ರಮ)
2. ಮಂತ್ರವಾಹಿನೀ (ಅರ್ಥಸಹಿತ) (08225232468)
3. ಅಥಸಪ್ತಶತೀ (ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ)
4. ಸಸ್ವರ ಮಹಾನ್ಯಾಸಾದಿಮಂತ್ರಾಃ (ಶ್ರೀ ರಾಮಕೃಷ್ಣ ಆಶ್ರಮ)
5. ಪವಮಾನ ಸೂಕ್ತಮ್ (ಮನ್ಮಥಸಿದ್ಧಾಂತ ಗ್ರಂಥಾಲಯ)
6. ಸಂಬಂಧಿತ ಧ್ವನಿ ಸುರುಳಿಗಳು

ವಿ.ಸೂ. :
1) ಬೃಹತ್ ಬೆಂಗಳೂರು ನಗರದಲ್ಲಿರುವ 8 ವರ್ಷ ಮೇಲ್ಪಟ್ಟು 80 ವರ್ಷ ವಯಸ್ಸಿನ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ (ಬ್ರಹ್ಮೋಪದೇಶವಾದ) ಬಾಲಕರು, ಬಾಲಕಿಯರು, ಗ್ರಹಸ್ಥರು, ಮಹಿಳೆಯರು, ನಿವೃತ್ತರು ಎಲ್ಲರಿಗೂ ಸುವರ್ಣಾವಕಾಶ, ಮುಕ್ತ ಪ್ರವೇಶ.
2) ಸಂಸ್ಕೃತ ಜ್ಞಾನ, ಮಂತ್ರಗಳನ್ನು ಕಂಠ ಮಾಡುವುದು ಅನಿವಾರ್ಯವಲ್ಲ, ಗತ ಕನ್ನಡ ಲಿಪಿಯಲ್ಲಿ ಮುದ್ರಿತ ಮಂತ್ರಗಳನ್ನು ಸಸ್ವರವಾಗಿ ಪಾರಾಯಣ (ಓದು) ಮಾಡುವುದು.
3) ಪ್ರತಿ ಶನಿವಾರ ಸಾಯಂಕಾಲ 3.30ರಿಂದ 6 ಗಂಟೆಯವರೆಗೆ ವಿದ್ಯಾರ್ಥಿಗಳು ಆಯ್ಕೆ ಮಾಡಿದ ಬೆಂಗಳೂರಿನಲ್ಲಿರುವ ಯಾವುದೇ ಗೃಹಸ್ಥರ ಮನೆಯಲ್ಲಿ/ದೇವಸ್ಥಾನದಲ್ಲಿ ತರಗತಿಗಳನ್ನು ನಡೆಸಲಾಗುವುದು. ಶನಿವಾರದ ತರಗತಿಗಳಿಗೆ ಬರಲಾಗದವರಿಗೆ ಭಾನುವಾರ ಬೆಳಿಗ್ಗೆ 6ರಿಂದ 8ರ ವರೆಗೆ ಶ್ರೀಯುತ ಜಿ. ಕೆ. ರಾಯರ ಮನೆಯಲ್ಲಿ ಅಭ್ಯಾಸ ಮಾಡಿಸಲಾಗುವುದು.

**ವಿವರಗಳಿಗೆ ಸಂಪರ್ಕಿಸಿ :**
**1) ಶ್ರೀಯುತ ಜಿ. ಕೆ. ರಾವ್, ಅಧ್ಯಾಪಕರು. (ದೂ) 08023230992, (ಮೊ) 9448206073 (ರಾತ್ರಿ 8-10 ಗಂಟೆ ವರೆಗೆ)**
**2) ಶ್ರೀಮತಿ ಸಬಿತ ಎಸ್.ರಾವ್, ಸಂಚಾಲಕರು (ದೂ) 08023333678, (ಮೊ) 9449818738**
**3) ಶ್ರೀ ರವಿಪ್ರಸಾದ ಶರ್ಮಾ (ಮೊ) 9880241499 (ವಿದ್ಯಾರ್ಥಿ)**
**- (ಗುರುಕುಲ ಪ್ರಕಟಣೆ-2)**


# ಶಿವ ಬ್ರಾಹ್ಮಣ ಸಭಾ ಕಾಸರಗೋಡು

ಶಿವ ಬ್ರಾಹ್ಮಣ ಸಭಾ ಕಾಸರಗೋಡು ಇದರ ತಿಂಗಳ ಸಭೆಯು ತಾರೀಕು 15-11-2009ರಂದು ಸಂಘದ ಅಧ್ಯಕ್ಷರಾದ ಶ್ರೀಯುತ ಪಿ.ಪಿ.ರಾವ್ ಇವರ ಮನೆಯಲ್ಲಿ ಜರಗಿತು. ತಾರೀಕು 4-10-2009ರಂದು ನಡೆದ ವಾರ್ಷಿಕ ಸಭೆಯ ವರದಿ, ಲೆಕ್ಕಗಳನ್ನು ಪರಿಶೀಲಿಸಿ ಅಂಗೀಕರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಮಹಿಳಾ ಘಟಕದ ಸದಸ್ಯೆಯರಾದ ಶ್ರೀಮತಿ ಮಾಲತಿ ಜಗದೀಶ್, ಶ್ರೀಮತಿ ಜಯಶ್ರೀ ಕೃಷ್ಣಯ್ಯ, ಶ್ರೀಮತಿ ಪ್ರಭಾ ರಮೇಶ, ಶ್ರೀಮತಿ ಪ್ರತಿಮಾ ವಿನೋದ ಅವರಿಂದ ಭಜನಾ ಕಾರ್ಯಕ್ರಮವು ನಡೆಯಿತು. ಗೌರವಾಧ್ಯಕ್ಷರಾದ ಶ್ರೀಯುತ ಎ.ವಿ. ಶ್ಯಾನುಭಾಗ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾರ್ಗದರ್ಶನವಿತ್ತರು.

2009-2011 ಎರಡು ವರ್ಷಗಳ ಅವಧಿಗೆ ಪದಾಧಿಕಾರಿಗಳು

| | | |
|---|---|---|
| ಗೌರವಾಧ್ಯಕ್ಷರು | : | ಶ್ರೀ ಎ.ವಿ. ಶ್ಯಾನುಭಾಗ್ |
| ಅಧ್ಯಕ್ಷರು | : | ಡಾ. ಪಿ.ಪಿ. ರಾವ್ |
| ಉಪಾಧ್ಯಕ್ಷರು | : | ಡಾ. ಸತ್ಯನಾಥ್ |
| | | ಶ್ರೀ ಮುರಳೀಧರ ಕಾಸರಗೋಡು |
| | | ಶ್ರೀ ಸುಕುಮಾರ್ ಅಲಂಪಾಡಿ |
| ಕಾರ್ಯದರ್ಶಿ | : | ಶ್ರೀ ಮನೋಹರ ಎ. |
| ಜತೆ ಕಾರ್ಯದರ್ಶಿಗಳು | : | ಶ್ರೀ ಎಂ.ಸಿ. ಶ್ಯಾನುಭಾಗ್ |
| | | ಶ್ರೀ ಜಗದೀಶ್ ಪಾರಕಟ್ಟೆ |
| | | ಶ್ರೀ ವಸಂತರಾಜ್ ವಿ.ಪಿ. |
| ಕೋಶಾಧಿಕಾರಿ | : | ಶ್ರೀ ಶುಭಕರ ಶ್ಯಾನುಭಾಗ್ |
| ಸದಸ್ಯರು | : | ಶ್ರೀ ಎ. ಕೃಷ್ಣಯ್ಯ, ಡಾ. ಕೆ.ಕೆ. ಶ್ಯಾನುಭಾಗ್, ಡಾ. ತೇಜಸ್ವಿವ್ಯಾಸ, ಶ್ರೀ ಕೆ.ಜಿ. ಶ್ಯಾನುಭಾಗ್, ಶ್ರೀ ಶ್ರೀನಾಥ್ ಎ., ಶ್ರೀ ಶ್ರೀಕೃಷ್ಣಯ್ಯ ಅನಂತಪುರ, ಶ್ರೀ ಅರವಿಂದ ರಾವ್ ಕಾಸರಗೋಡು, ಶ್ರೀ ರಾಜೇಂದ್ರ ಬಜಕುಡ್ಲಿ, ಶ್ರೀ ರಾಮಮಾಧವ, ಶ್ರೀ ಎಂ. ಚಂದ್ರಶೇಖರ ಮರದಬೈಲ್, ಶ್ರೀ ಬಿ.ಜಿ. ರಾವ್ ಕಾಸರಗೋಡು, ಶ್ರೀ ಕೇಶವ ಭಟ್ ಕುಂಬರ್, ಡಾ. ಶಂಕರ್‌ರಾಜ್, ಶ್ರೀ ಪ್ರಸನ್ನ ಶ್ಯಾನುಭಾಗ್, ಶ್ರೀ ವೆಂಕಟೇಶಯ್ಯ, ಶ್ರೀ ಸತ್ಯನಾರಾಯಣ ನೀಲಂಗಳ, ಶ್ರೀ ಜಗದೀಶ್ ಶರ್ಮ |

ಡಾ. ಪಿ.ಪಿ. ರಾವ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀಯುತ ವಸಂತರಾಜ್ ಸ್ವಾಗತಿಸಿ, ಶ್ರೀ ಮನೋಹರ ಎ. ವಂದಿಸಿದರು.

ಮುಂದಿನ ಸಭೆಯನ್ನು ತಾ. 20-12-2009ರಂದು ಶ್ರೀಯುತ ಶುಭಕರ ಶ್ಯಾನುಭಾಗ್‌ರವರ ಮನೆಯಲ್ಲಿ ಜರಗಿಸಲು ತೀರ್ಮಾನಿಸಲಾಯಿತು.

ಕಾರ್ಯದರ್ಶಿ
ಶಿವಬ್ರಾಹ್ಮಣ ಸಭಾ ಕಾಸರಗೋಡು

# ಸಿಂಗಾಪೂರ್ ಪ್ರವಾಸ ಕಥನ

(4ನೇ ಪುಟದಿಂದ)



ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಪಟ್ಟಣಗಳನ್ನು ಸುಂದರ ಹಾಗೂ ಸ್ವಚ್ಛವಾಗಿರಿಸಿ ಪ್ರಪಂಚದ ಎಲ್ಲಾ ದೇಶಗಳಿಂದ ಪ್ರವಾಸಿಗರು ಆಕರ್ಷಿತರಾಗಿ ಅಲ್ಲಿಗೆ ಭೇಟಿ ನೀಡುವಂತೆ ಶ್ರಮಿಸಿದ್ದಾರೆ. ಅಲ್ಲದೆ ಪ್ರವಾಸೋದ್ಯಮವೇ ಅವರ ಆದಾಯದ ಮೂಲವಾಗಿದೆ.

ಟೂರಿಸ್ಟ್ ಗೈಡ್‌ನ ಜತೆ ಬಸ್ಸಿನಲ್ಲಿ ವಿಮಾನನಿಲ್ದಾಣದಿಂದ 150 ಕಿ.ಮೀ. ದೂರ ಇರುವ ''ಪಟ್ಟಾಯಂ'' ಎಂಬ ಪಟ್ಟಣಕ್ಕೆ ಪ್ರಯಾಣ ಮಾಡಿ, ಸಮುದ್ರತೀರದಲ್ಲಿ ಇರುವ 27 'ಅಂತಸ್ತಿನ ಮಾರ್ಕ್‌ಲ್ಯಾಂಡ್' ಹೋಟೇಲ್‌ನಲ್ಲಿ ಉಳಿದು ಊಟ ಮುಗಿಸಿ ವಿರಮಿಸಿದೆವು. ಪಟ್ಟಾಯಂ ನಗರವು ಸಮುದ್ರ ಕಿನಾರೆಯಲ್ಲಿದ್ದು ಬ್ಯಾಂಕಾಕಿನಂತೆ ಬಹಳ ದೊಡ್ಡಪಟ್ಟಣವಾಗಿದೆ. ಪಟ್ಟಾಯಂ ಎಂದರೆ ಅಲ್ಲಿಯ ಥ್ಯಾ ಭಾಷೆಯಲ್ಲಿ ಬೀಸುವ ಗಾಳಿ ಎಂದರ್ಥ. ಇಲ್ಲಿಯ ಥ್ಯಾ ಭಾಷೆ ಕೇಳಲು ಇಂಪು. ಭಾಷೆಯನ್ನು ರಾಗದಲ್ಲಿ ಮಾತನಾಡುತ್ತಾರೆ. ಇಲ್ಲಿಯ ಪ್ರಸಿದ 'ಶ್ರೀರಚ ಟೈಗರ್ ಝೂ' ನೋಡಿದೆವು. ಥಾಯ್ ಸರಕಾರದ, ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಆಭರಣಗಳ ಮಾರಾಟ ಮಳಿಗೆಯನ್ನು ಸಂದರ್ಶಿಸಿದೆವು. ಹರಳುಗಳ ಗ್ಯಾಲರಿಯ ಮಿನಿ ಟ್ರೈನಿನಲ್ಲಿ ಪ್ರಯಾಣ ಮಾಡಿ ವಿವಿಧ ಹಂತದ ಹರಳು ನಿರ್ಮಾಣದ ದೃಶ್ಯಗಳನ್ನು ನೋಡಿದೆವು. ಅಲ್ಲಿ ನೋಡಿದ 'ಅಲ್‌ಕಝುರ್ ಶೋ' ಎಂಬ ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮವು ಎಲ್ಲಾ ಪ್ರವಾಸಿಗರಿಗೂ ಖುಶಿಯನ್ನು ನೀಡಿತು. ಸುಂದರ ಹುಡುಗಿಯರ ನೃತ್ಯ, ಉಡುಗೆ-ತೊಡುಗೆ, ರಂಗಜೋಡಣೆ ಹಾಗೂ ಬೆಳಕಿನ ವ್ಯವಸ್ಥೆ ಎಲ್ಲವೂ ಆಕರ್ಷಣೀಯವಾಗಿದ್ದವು.

4-11-2009ರಂದು ಬೆಳಿಗ್ಗೆ ಸ್ಪೀಡ್ ಬೋಟ್‌ನ ಮೂಲಕ 'ಕೋರಲ್ ಐಲ್ಯಾಂಡ್' ಅಥವಾ ಹವಳ ದ್ವೀಪಕ್ಕೆ ಭೇಟಿ ನೀಡಿದೆವು. ಬೋಟ್‌ನಲ್ಲಿ ಪಯಣಿಸುವಾಗ ರಕ್ಷಿಸಲ್ಪಟ್ಟ ಹವಳದ ಬಂಡೆಗಳು ನೋಡಲು ಸಿಗುತ್ತವೆ. ಸಮುದ್ರದ ನೀರಿನಲ್ಲಿ ಎಲ್ಲರೂ ಮಕ್ಕಳಂತೆ ಆಟ ಆಡುತ್ತಿದ್ದರು. ಮಧ್ಯಾಹ್ನ ಊಟದ ಬಳಿಕ 'ನಾಂಗ್-ನೂಚ್' ಎಂಬ ಹಳ್ಳಿಗೆ ಭೇಟಿ ನೀಡಿ ಅಲ್ಲಿ 'ಥ್ಯಾ ಕಲ್ಚರಲ್ ಶೋ' ಎಂಬ ತುಂಬಾ ಸುಂದರವಾದ ನೃತ್ಯ ಕಾರ್ಯಕ್ರಮ ನೋಡಿದೆವು. ಬಳಿಕ 'ಎಲಿಫೆಂಟ್ ಶೋ' ನೋಡಿದೆವು. ಥ್ಯಾಲ್ಯಾಂಡ್‌ನಲ್ಲಿ ಅಧಿಕ ಸಂಖ್ಯೆಯಲ್ಲಿ ಆನೆಗಳಿದ್ದು ಅವು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದಿವೆ. ಈ ಹಳ್ಳಿಯಲ್ಲಿ ಇರುವ ಒಂದು ವಿಶಾಲವಾದ ಸ್ಟೇಡಿಯಂನಲ್ಲಿ ಸುಮಾರು ಒಂದು ಗಂಟೆಯ ಕಾಲ ಆನೆಗಳು ಕಾಲ್ಚೆಂಡು, ಬಾಸ್ಕೆಟ್‌ಬಾಲ್, ಕ್ರಿಕೆಟ್ ಆಡುವುದನ್ನು, ಸೈಕಲ್ ಸವಾರಿ ಮಾಡುವುದನ್ನು ತೋರಿಸುತ್ತಾರೆ. ಬೃಹದಾಕಾರದ ಆನೆಗಳನ್ನು ಪಳಗಿಸಿ ಅವುಗಳಿಂದ ವಿವಿಧ ಕ್ರೀಡೆಗಳನ್ನು ಮಾಡಿಸುವುದು ದೊಡ್ಡ ಸಾಧನೆಯೇ ಸೈ.

ಸಂಜೆಯಾದಾಗ 'ಟ್ರೋಪಿಕಲ್ ಗಾರ್ಡನ್' ಸಂದರ್ಶಿಸಿದೆವು. ಇದು ತುಂಬಾ ವಿಶಾಲವಾಗಿದ್ದು ಮಣ್ಣಿನ ಮಡಕೆಯಿಂದಲೇ ನಿರ್ಮಿಸಲ್ಪಟ್ಟ ಕಮಾನುಗಳು ಹಾಗೂ ವಿವಿಧ (ತಿಂಗಳುಗಟ್ಟಲೆ ಉಳಿಯುವ) ಆರ್ಕಿಡ್ ಹೂಗಳನ್ನು ನೋಡಿದೆವು. ಎಲ್ಲಿ ನೋಡಿದರೂ ವಿವಿಧ ಬಣ್ಣಗಳಲ್ಲಿ ಅರಳಿ ನಿಂತಿರುವ ಹೂಗಳ ದೃಶ್ಯ ನಯನಮನೋಹರವಾಗಿದೆ.

5-11-2009ರಂದು ಬೆಳಿಗ್ಗೆ ಬಸ್ಸಿನಲ್ಲಿ ಬ್ಯಾಂಕಾಕ್‌ಗೆ ಪ್ರಯಾಣ ಮಾಡಿದೆವು. ಬ್ಯಾಂಕಾಕ್‌ನಲ್ಲಿ ಕೆಲವು ಪ್ರಸಿದ ಬುದನ ದೇವಾಲಯಗಳನ್ನು ನೋಡಿದೆವು. 46 ಮೀಟರ್ ಉದ್ದ 15 ಮೀಟರ್ ಎತ್ತರದ ಕೈಯಲ್ಲಿ ತಲೆಯನ್ನು ಇಟ್ಟು ಮಲಗಿದ್ದ ಬಂಗಾರ ಬಣ್ಣದ ಬುದನ ವಿಗ್ರಹ ಬಲು ಸುಂದರ. ಥಾಯ್ ಶೈಲಿಯಲ್ಲಿ ನಿರ್ಮಿಸಲ್ಪಟ್ಟ ಮಾರ್ಬಲ್ ದೇವಸ್ಥಾನವನ್ನು ಸಂದರ್ಶಿಸಿದೆವು. ಬ್ಯಾಂಕಾಕ್‌ನ 27 ಅಂತಸ್ತಿನ ಪ್ರಸಿದ ಹೋಟೇಲ್ 'ಇಂದ್ರ ರಿಜೆಂಟ್'ನಲ್ಲಿ ನಮ್ಮ ವಾಸ್ತವ್ಯ. ನಂತರ ಶಾಪಿಂಗ್, ಊಟ ಮತ್ತು ವಿಶ್ರಾಂತಿ.

ಇಲ್ಲಿಯ ವ್ಯವಹಾರಗಳೆಲ್ಲ 'ಭಾಟ್' ಎಂದು ಕರೆಯಲ್ಪಡುವ ಕರೆನ್ಸಿಯಲ್ಲಿ ನಡೆಯುತ್ತಿದ್ದು ಇದು ನಮ್ಮ $1^1/_2$ ರೂ.ಗೆ ಸಮ. ಅಲ್ಲಿಯ 10 ಭಾಟ್ ಎಂದರೆ ನಮ್ಮಲ್ಲಿಯ 15 ರೂ. ಗೆ ಸಮಾನ. ನಮ್ಮಲ್ಲಿಗೆ ಹೋಲಿಸಿದರೆ ಇಲ್ಲಿ ಕುಡಿಯುವ ನೀರೂ ಸೇರಿ ಪ್ರತಿ ವಸ್ತುವೂ ತುಂಬಾ ದುಬಾರಿ. ಸಾಯಂಕಾಲವಾದೊಡನೆ ರಸ್ತೆ ಬದಿಯ ವ್ಯಾಪಾರ ಜೋರಾಗಿ ಶುರುವಾಗುತ್ತದೆ. ಮುಖ್ಯವಾಗಿ ರೆಡಿಮೇಡ್ ಬಟ್ಟೆಗಳು, ಚಪ್ಪಲ್, ಇಲೆಕ್ಟ್ರಾನಿಕ್ಸ್ ವಸ್ತುಗಳು, ತಿಂಡಿ ತಿನಿಸು, ಇತ್ಯಾದಿ ಎಲ್ಲಾ ವಸ್ತುಗಳ ದರವನ್ನು ಚೀಟಿಯಲ್ಲಿ ಬರೆದು ಅಂಟಿಸಿರುತ್ತಾರೆ. ಇಲ್ಲಿ ಚೌಕಾಸಿ, ಮೋಸ, ವಂಚನೆ ಇಲ್ಲ. ಸಂಜೆ 5 ರಿಂದ 7ರ ತನಕ ಮಾತ್ರ ರಸ್ತೆ ಬದಿ ವ್ಯಾಪಾರ ನಡೆಯುವುದು. ವ್ಯಾಪಾರ ಮುಗಿದೊಡನೆ ತಮ್ಮ ತಮ್ಮ ಅಂಗಡಿ ಪ್ಯಾಕ್ ಮಾಡಿ ಕಸವನ್ನು ಬಳಿದು ಕಸದ ಪೆಟ್ಟಿಗೆಯಲ್ಲೇ ಹಾಕಿ ಮನೆಗೆ ಹೋಗುತ್ತಾರೆ. ರಸ್ತೆಗಳೂ ತುಂಬಾ ಅಗಲವಾಗಿರುವುದರಿಂದ ಸಂಚಾರ ಸುಲಭ. ವಾಹನಗಳಿಗೆ ವೇಗಮಿತಿ ಇದೆ. ಎಲ್ಲರೂ ರಸ್ತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವ ಕಾರಣ ರಸ್ತೆ ಅಪಘಾತಗಳು ತುಂಬಾ ಕಡಿಮೆ. ಇಲ್ಲಿ ಅಪರಾಧ ಅಥವಾ ವಂಚನೆಗೆ ಕಠಿಣ ಶಿಕ್ಷೆಯಿರುವುದರಿಂದ ಜನರು ತಪ್ಪು ಮಾಡುವುದಿಲ್ಲ.

6-11-2009ನೇ ಬೆಳಿಗ್ಗೆ 'ಸಫಾರಿ ವರ್ಲ್ಡ್'ಗೆ ಹೊರಟೆವು. ಇದು ಥ್ಯಾಲ್ಯಾಂಡ್‌ನ ಪ್ರಸಿದ ತೆರೆದ ಮೃಗಾಲಯ. ಸಾಧಾರಣ 200 ಎಕ್ರೆ ಜಾಗದಲ್ಲಿ ನಿರ್ಮಿಸಲಾಗಿದೆ. ಆನೆ, ಹುಲಿ, ಕರಡಿ, ಜಿಂಕೆ, ಜಿರಾಫೆ, ಜೀಬ್ರಾ, ಆಸ್ಟ್ರಿಚ್, ರೈನೋ, ಗೊರಿಲ್ಲಾ, ನವಿಲು ಮುಂತಾದ ಎಲ್ಲಾ ತರಹದ ಪ್ರಾಣಿ, ಪಕ್ಷಿಗಳು ಸ್ವತಂತ್ರವಾಗಿ ಓಡಾಡುತ್ತಿದ್ದವು. 'ಸಫಾರಿ ವರ್ಲ್ಡ್'ನಲ್ಲಿ ಬಸ್ಸಿನಲ್ಲಿ ಸುತ್ತಿ ಪ್ರಾಣಿಗಳನ್ನು ಹತ್ತಿರದಿಂದ ನೋಡುವ ವ್ಯವಸ್ಥೆ ಇದೆ. ಇಲ್ಲಿ ಪ್ರಾಣಿಗಳನ್ನು ಸಾಕುವ ರೀತಿ ಮತ್ತು ಅವುಗಳಿಗೆ ಜೀವಿಸಲು ಬೇಕಾದ ನೈಸರ್ಗಿಕ ಕಾಡಿನಂತೆಯೇ ಇರುವ ಪರಿಸರವನ್ನು ನಿರ್ಮಿಸಿದ ರೀತಿ ನಿಜಕ್ಕೂ ಮೆಚ್ಚುವಂತದ್ದು.

ನಂತರ 'ಮೆರಿನ್ ಪಾರ್ಕ್' ಸಂದರ್ಶಿಸಿದೆವು. ಪಾರ್ಕ್‌ನಲ್ಲಿ ಚಿಂಪಾಂಜಿ ಶೋ ನೋಡಿದೆವು. ಚಿಂಪಾಂಜಿಗಳಿಂದ ಬಾಕ್ಸಿಂಗ್, ಸರ್ಕಸ್, ಡ್ಯಾನ್ಸ್ ಎಲ್ಲಾ ಮಾಡಿಸಿದರು. ಬಳಿಕ 'ಸೀ ಲಯನ್ ಶೋ' ಹಾಗೂ 'ಡಾಲ್ಫಿನ್ ಶೋ' ತೋರಿಸಿದರು. ಅವರು ಮೂಕ ಪ್ರಾಣಿಗಳನ್ನು ಪಳಗಿಸಿ ಪ್ರದರ್ಶನ ನಡೆಸುವ ರೀತಿ ಅದ್ಭುತವಾಗಿದೆ.

7-11-2009ರಂದು ಬೆಳಿಗ್ಗೆ 'ಗ್ರ್ಯಾಂಡ್ ಪ್ಯಾಲೇಸ್' ನೋಡಲು ಹೋದೆವು. ಈ ಅರಮನೆಯ ಆವರಣವು 21,800 ಚದರ ಮೀಟರ್ ವಿಸ್ತೀರ್ಣದಲ್ಲಿ ಹರಡಿದ್ದು 1782ರಲ್ಲಿ ರಾಮ 1 ಎಂಬ ಅರಸನಿಂದ ಕಟ್ಟಲ್ಪಟ್ಟಿದೆ. ಈ ಸಂಕೀರ್ಣದಲ್ಲಿ ಚಿನ್ನದ ಲೇಪನದಿಂದ ಕೂಡಿದ ಹಲವಾರು ಬುದನ ದೇವಾಲಯಗಳಿದ್ದು ಪ್ರತಿಯೊಂದು ದೇವಾಲಯವೂ ತುಂಬಾ ಸುಂದರವಾಗಿದೆ. ಇಲ್ಲಿ ಅಪರೂಪದ 'ಎಮರಾಲ್ಡ್ ಬುದ' (ದೊಡ್ಡದಾದ ಒಂದೇ ಪಚ್ಚೆ ಕಲ್ಲಿನಿಂದ ನಿರ್ಮಿಸಿದ) ವಿಗ್ರಹವಿರುವ ವಿಶೇಷ ಬುದ ದೇವಾಲಯವೂ ಇದೆ.

ಥ್ಯಾಲ್ಯಾಂಡ್‌ನ ಜನರು ಪ್ರವಾಸಿಗರೊಂದಿಗೆ ನಯವಿನಯದಿಂದ ವರ್ತಿಸುತ್ತಾರೆ. ಇಂಗ್ಲೀಷ್ ಭಾಷೆ ತಿಳಿದವರು ಕಡಿಮೆ. ದುಡಿಯುವವರಲ್ಲಿ ಹೆಚ್ಚಿನವರು 16 ರಿಂದ 25 ವರ್ಷದೊಳಗಿನ ಯುವ ಮಹಿಳೆಯರು. ನೋಡಲು ತುಂಬಾ ಆಕರ್ಷಕವಾಗಿದ್ದಾರೆ. ಅಂಗಡಿಗಳಲ್ಲಿ ಮತ್ತು ಹೋಟೇಲುಗಳಲ್ಲಿ ಪರಿಚಾರಿಕೆಯರಾಗಿಯೂ ಹುಡುಗಿಯರೇ ಪ್ರಾಮಾಣಿಕವಾಗಿ ದುಡಿಯುತ್ತಾರೆ. ನಾವೆಲ್ಲಾ ಆಶ್ಚರ್ಯಪಡುವಷ್ಟು ಹುಡುಗಿಯರ ಸಂಖ್ಯೆ ಜಾಸ್ತಿ ಇದೆ. ನಮ್ಮ ಥ್ಯಾಲ್ಯಾಂಡ್ ಪ್ರವಾಸವನ್ನು ಮುಗಿಸಿ ನಮ್ಮನ್ನು ಬೀಳ್ಕೊಡಲು ವಿಮಾನ ನಿಲ್ದಾಣದವರೆಗೂ ಬಂದ ಟೂರಿಸ್ಟ್ ಗೈಡ್ 'ನೇನಾ'ಳಿಗೆ ಶುಭ ವಿದಾಯ ಹೇಳಿ ಮಲೇಶಿಯಾಕ್ಕೆ ಹೊರಡುವ ಏರ್ ಏಷ್ಯಾ ಫ್ಲೈಟ್ (ಎ.ಕೆ. 739) ವಿಮಾನವನ್ನು ಏರಿದೆವು.

ಮುಂದಿನ ಪ್ರಯಾಣ ಮಲೇಶಿಯಾಕ್ಕೆ......


(ಮುಂದುವರಿಯುವುದು)

# ಶ್ರೀ ಶಾರದಾ ಮಂಟಪ-ಯಕ್ಷಗಾನ ತರಬೇತಿ

ಕರಾವಳಿಯ ಗಂಡುಕಲೆಯಾದ ಯಕ್ಷಗಾನವನ್ನು ಉಳಿಸಿ, ಬೆಳೆಸಬೇಕೆಂಬ ಕಾರಣದಿಂದ ಕಳೆದ 2 ವರ್ಷಗಳಿಂದ ನಮ್ಮ ಸಮಾಜ ಬಾಂಧವರನ್ನು, ಮಕ್ಕಳನ್ನು ಕೂಡಿಕೊಂಡು ಪ್ರಾರಂಭದಲ್ಲಿ ಯಕ್ಷಗಾನ ಕೇಂದ್ರದ ಗುರುಗಳಾದ ಶ್ರೀ ದೇವದಾಸ ಕೂಡ್ಲಿ ಮತ್ತು ಈಗ ಕೇಂದ್ರದ ಶ್ರೀ ಮಂಜುನಾಥ ಕುಲಾಲ್ ಅವರಿಂದ ಶ್ರೀ ಶಾರದಾ ಮಂಟಪದಲ್ಲಿ ಯಕ್ಷಗಾನ ತರಗತಿಯನ್ನು ನಡೆಸಿಕೊಂಡು ಬರುತ್ತಿದ್ದೇವೆ. ಅಂತೆಯೇ ಈಗಾಗಲೇ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ತಂಡ ಎಂಬ ಹೆಸರಿನಲ್ಲಿ 3 ಯಕ್ಷಗಾನ ಪ್ರದರ್ಶನಗಳನ್ನು (ಹಿಡಿಂಬಾ ವಿವಾಹ, ಜಾಂಬವತಿ ಕಲ್ಯಾಣ-2 ಪ್ರಯೋಗಗಳು) ನೀಡಿದ್ದೇವೆ ಎಂದು ತಿಳಿಸಲು ಹೆಮ್ಮೆಯೆನಿಸುತ್ತದೆ. ನಮ್ಮ ಸಮಾಜ ಬಾಂಧವರಿಗೆ ಪ್ರತಿ ಆದಿತ್ಯವಾರ ಸಂಜೆ 6-30 ರಿಂದ 8-30ರವರೆಗೆ ತರಗತಿಗಳನ್ನು ನಡೆಸಲಾಗುವುದು. ಆಸಕ್ತ ಸಮಾಜ ಬಾಂಧವರು ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಮೇನೆಜರನ್ನು ಸಂಪರ್ಕಿಸಬಹುದು.

**- ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀ ಶಾರದಾ ಕಲ್ಯಾಣ ಮಂಟಪ, ಕುಂಜಿಬೆಟ್ಟು, ಉಡುಪಿ**

# ರಾಜ್ಯಮಟ್ಟದ ''ಶಾಸ್ತ್ರ'' ಸ್ಪರ್ಧೆ-ಚಿ। ತಿಲಕನಿಗೆ ಬಹುಮಾನ



ಸರಕಾರಿ ಸಂಸ್ಕೃತ ಕಾಲೇಜಿನಲ್ಲಿ ''ಆಚಾರ್ಯ'' ಪದವಿಗೆ ಕಲಿಯುವ ಶಿಕ್ಷಾರ್ಥಿ ಹಾಗೂ ಸರಕಾರೀ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ''ವಿದ್ವತ್'' ಪದವಿಗೆ ಕಲಿಯುವ ಶಿಕ್ಷಾರ್ಥಿಗಳಿಗಾಗಿ ಸರಕಾರದಿಂದ ನಡೆಯುವ ವಾರ್ಷಿಕ ''ಶಾಸ್ತ್ರ'' ವಿಷಯ ಸ್ಪರ್ಧೆಯಲ್ಲಿ ಚಿ। ತಿಲಕ ''ತೃತೀಯ'' ಬಹುಮಾನ ಗೆದ್ದುಕೊಳ್ಳುವ ಮೂಲಕ ತನ್ನ ಅರ್ಹತೆಯನ್ನು ಮತ್ತೆ ದಾಖಲಿಸಿದ್ದಾನೆ. ಬಹುಮಾನ ನಗದು ಹಣ ಹಾಗೂ ಮಾನಪತ್ರಿಕೆಯನ್ನು ಒಳಗೊಂಡಿರುತ್ತದೆ.

ಶೃಂಗೇರಿ ಶಾರದಾಪೀಠದಿಂದ ನಡೆಯುವ ಶ್ರೀಮದ್ ಭಗವದ್ಗೀತೆಯ 18 ಅಧ್ಯಾಯದ ಪೂರ್ಣಕಂಠಪಾಠ ಸ್ಪರ್ಧೆಯಲ್ಲಿ ಪಾಲ್ಗೊಂಡು ಆತ ಈ ಹಿಂದೆ ಶೃಂಗೇರಿ ಜಗದ್ಗುರುಗಳಿಂದ ನಗದು ಬಹುಮಾನದೊಂದಿಗೆ ಮಾನಪತ್ರಿಕೆಯನ್ನು ಪಡೆದಿರುತ್ತಾನೆ.

20-11-2009ರ ಶುಕ್ರವಾರದಂದು ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ವಿದ್ಯಾಲಯದಲ್ಲಿ ಈ ಸ್ಪರ್ಧೆ ನಡೆಯಿತು. 'ಪೂರ್ವಮೀಮಾಂಸ'. 'ಉತ್ತರ ಮೀಮಾಂಸ' ವ್ಯಾಕರಣಾದಿ ಶಾಸ್ತ್ರೀಯ ವಿಷಯಗಳಲ್ಲಿ ಈ ಸ್ಪರ್ಧೆ ನಡೆದಿದ್ದು 'ಪೂರ್ವ ಮೀಮಾಂಸ'ಕ್ಕೆ ಸಂಬಂಧಿಸಿದ ವಿಷಯದಲ್ಲಿ ಸ್ಪರ್ಧಿಸುವಂತೆ ಬೆಂಗಳೂರು ಜಯಚಾಮರಾಜೇಂದ್ರ ಸಂಸ್ಕೃತ ವಿದ್ಯಾಲಯದಿಂದ ಚಿ। ತಿಲಕನ ಹೆಸರು ಸೂಚಿತವಾಗಿತ್ತು.

'ಸ್ಪರ್ಧೆ'ಯ ನಿಯಮವು ವಿಶಿಷ್ಟವಾಗಿದ್ದು, ಸ್ಪರ್ಧೆಯ 20 ತಾಸು ಮೊದಲು ವಿಷಯ ನೀಡಿಕೆ ಹಾಗೂ ಸ್ಪರ್ಧೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ನಂತರ ಪರೀಕ್ಷಕರ ಪ್ರಶ್ನೆಗೆ ಸ್ಪರ್ಧಿ ಉತ್ತರಿಸಬೇಕಾದ್ದು ಪ್ರಮುಖವಾಗಿರುತ್ತದೆ. ರಾಜ್ಯದ ಎಲ್ಲಾ ಸಂಸ್ಕೃತ ಕಾಲೇಜುಗಳಿಂದ ಹಾಗೂ ಪಾಠಶಾಲೆಗಳಿಂದ ಆಯ್ದ ಶಿಕ್ಷಾರ್ಥಿಗಳು ಇದರಲ್ಲಿ ಪಾಲ್ಗೊಂಡಿರುತ್ತಾರೆ.

ಚಿ। ತಿಲಕ, ಉಡುಪಿ ಸ್ಥಾನಿಕಸಭಾದ ಅಧ್ಯಕ್ಷರಾಗಿರುವ ಶ್ರೀ ಸಿ.ಎಸ್. ರಾವ್ ಅವರ ತಮ್ಮ, ಬೆಂಗಳೂರಿನಲ್ಲಿರುವ ಶ್ರೀ ಮೋಹನ ರಾವ್ ಹಾಗೂ ಶ್ರೀಮತಿ ಜಯಲಕ್ಷ್ಮೀ ಅವರ ಪುತ್ರ. ಬೆಂಗಳೂರಿನ ವೇದವಿಜ್ಞಾನ ಗುರುಕುಲಂನಲ್ಲಿದ್ದು ವೇದಾಂತ, ವ್ಯಾಕರಣ, ನ್ಯಾಯ ಶಾಸ್ತ್ರಗಳಲ್ಲಿ ಪರಿಣತಿ ಪಡೆಯುತ್ತಿದ್ದಾನೆ.

## ಧನುರ್ಮಾಸದ ವಿಶೇಷ ದಿನಗಳು

| | |
|---|---|
| 15-12-2009 | ಧನು ಸಂಕ್ರಮಣ (ಮೂಲಾ ನಕ್ಷತ್ರಾರಂಭ) |
| 16-12-2009 | ಎಳ್ಳಮಾವಾಸ್ಯೆ |
| 28-12-2009 | ಸರ್ವೇಕಾದಶಿ - ಪೂರ್ವಾಷಾಢಾ ನಕ್ಷತ್ರಾರಂಭ |
| 29-12-2009 | ಪ್ರದೋಷಃ |
| 31-12-2009 | ಪೂರ್ಣಿಮಾ - ಚಂದ್ರಗ್ರಹಣ |
| 03-01-2010 | ಸಂಕಷ್ಟ ಚತುರ್ಥಿ ಚಂದ್ರೋದಯ ಗಂಟೆ 9-06ಕ್ಕೆ |
| 10-01-2010 | ಉತ್ತರಾಷಾಢಾ ನಕ್ಷತ್ರಾರಂಭ - ಸರ್ವೇಕಾದಶಿ |
| 12-01-2010 | ಪ್ರದೋಷಃ |
| 14-01-2010 | ಮಕರ ಸಂಕ್ರಮಣ |

**ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ, ಧರ್ಮಶಾಲೆ, ಬಾರಕೂರು ವಾರ್ಷಿಕೋತ್ಸವ ಮತ್ತು ಢಕ್ಕೆ ಬಲಿ ಸೇವೆ**

ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ, ಧರ್ಮಶಾಲೆ, ಹೇರಾಡಿ, ಬಾರಕೂರು ಇಲ್ಲಿಯ ವಾರ್ಷಿಕೋತ್ಸವ ಹಾಗೂ ಢಕ್ಕೆ ಬಲಿ ಸೇವೆಯು ತಾ. 15-12-2009ನೇ ಮಂಗಳವಾರದಿಂದ ಮೊದಲ್ಗೊಂಡು ದಿನಾಂಕ 17-12-2009ನೇ ಗುರುವಾರದವರೆಗೆ ನಡೆಯಲಿದ್ದು ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಅಮ್ಮನವರ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

## ವಿದೇಶ ಪಯಣ

ಬೆಂಗಳೂರಿನಲ್ಲಿರುವ ಇನ್‌ಫೋಸಿಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕಾರ್ತಿಕ್ ರಾವ್ ಬಪ್ಪನಾಡು (ಶ್ರೀ ಬಿ.ವಿ. ರಾವ್ ಬೆಂಗಳೂರು ಮತ್ತು ಶ್ರೀಮತಿ ವಿದ್ಯಾರಾವ್‌ರವರ ಪುತ್ರ) ತಾ. 9-10-2009ರಂದು ಕಾರ್ಯನಿಮಿತ್ತ ಲಂಡನಿಗೆ ತೆರಳಿರುತ್ತಾರೆ.

ಅವರ ಪತ್ನಿ ಶ್ರೀಮತಿ ಅಶ್ವಿನಿಯವರು (ದಿ. ಕೆ.ಎಲ್. ಶ್ಯಾನುಭಾಗ್ ಹಾಗೂ ಶ್ರೀಮತಿ ಉಷಾ ಶ್ಯಾನುಭಾಗ್‌ರವರ ಪುತ್ರಿ) ತಮ್ಮ ಮಗ ಚಿ. ಪ್ರಣಬ್‌ನೊಂದಿಗೆ ದಿನಾಂಕ 10-11-2009ರಂದು ಪತಿಯೊಂದಿಗೆ ವಾಸ್ತವ್ಯಕ್ಕಾಗಿ ಲಂಡನಿಗೆ ತೆರಳಿರುತ್ತಾರೆ.

## ನಿಧನ

### ಶ್ರೀಮತಿ ಎಂ.ಕೆ. ಲಕ್ಷ್ಮೀ

ದಿ। ಎಂ.ಕೆ. ಗೋಪಾಲಕೃಷ್ಣ ರಾವ್ ಪಡುಬಿದ್ರಿ ಇವರ ಧರ್ಮಪತ್ನಿ ಶ್ರೀಮತಿ ಎಂ.ಕೆ. ಲಕ್ಷ್ಮೀಯವರು (80 ವರ್ಷ) ತಾ. 15-11-2009ರಂದು ನಿಧನರಾದರು. ಇವರು ನಾಲ್ವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ಪುಣ್ಯ ಸ್ಮರಣೆ



ಜನನ : 4-2-1946
ಮರಣ : 20-12-2007

**ಶ್ರೀಮತಿ ಕುಸುಮ ಗೋವಿಂದ ರಾವ್**
ಕರಾಡ

ಧನುರ್ಮಾಸಶುಕ್ಲಏಕಾದಶಿ ತಾ. 27-12-2009ಕ್ಕೆ ನೀವು ನಮ್ಮನ್ನಗಲಿ 2 ವರ್ಷ ಕಳೆದರೂ ನಿಮ್ಮ ನೆನಪು ಹಸಿರಾಗಿದ್ದು ನಿಮ್ಮ ಆದರ್ಶ, ಸದ್ಗುಣ ಸಂಪನ್ನತೆಯೇ ನಮಗೆ ದಾರಿದೀಪ. ನಿಮ್ಮನ್ನು ನಿರಂತರವೂ ಸ್ಮರಿಸುತ್ತಿರುವ,
ವೈ. ಗೋವಿಂದ ರಾವ್ (ಪತಿ); ಮಕ್ಕಳು - ವೈ. ನಾಗರಾಜ ರಾವ್ ಮತ್ತು ಶ್ರೀಮತಿ ಸುಮಂಗಲ ಎನ್. ರಾವ್; ವೈ. ಕೃಷ್ಣ ರಾಜ ರಾವ್ ಮತ್ತು ಶ್ರೀಮತಿ ವೈ. ಗಾಯತ್ರಿ ಕೆ. ರಾವ್ ; ಶ್ರೀಮತಿ ಹೇಮಲತಾ ರಾಜೇಂದ್ರ ಕುಮಾರ್; ರಾಜೇಂದ್ರ ಗೋಪಾಲ ಕೃಷ್ಣ ರಾವ್ ಮತ್ತು ಋತುಜ; ಋಷಿಕೇಶ್; ರಕ್ಷಾ ; ರಕ್ಷಿತಾ ; ನಮ್ರತಾ ; ಅನ್ವಿತ (ಮೊಮ್ಮಕ್ಕಳು)

# ಫಾರ್ಮುಲಾ - 1 ಸ್ವಿಫ್ಟ್ ರಾಷ್ಟ್ರೀಯ ಚಾಂಪಿಯನ್ ಕರ್ವಾಲು ಸುದರ್ಶನ ರಾವ್

**ಗೆಲುವಿನ ಹಾದಿಯ ಹೆಜ್ಜೆಯ ಗುರುತುಗಳು**

**- ಕೆ. ವೇಣುಗೋಪಾಲ ರಾವ್**

2009 ಅಕ್ಟೋಬರ್ ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಈತ (ಸುದರ್ಶನ ರಾವ್) ಓದುಗರ ಗಮನ ಸೆಳೆದಿರಬಹುದು. ಕರ್ವಾಲು ಸುದರ್ಶನ ರಾವ್ ಸಾಧನೆ 'ಅಮೋಘ' ಎಂಬುದನ್ನು ನಮ್ಮ ಸಮಾಜದವರಲ್ಲದ ಕ್ರೀಡಾಭಿಮಾನಿ ಸ್ನೇಹಿತರು ಹೇಳುವುದನ್ನು ಕೇಳಿಸಿಕೊಂಡಾಗ ನನ್ನಲ್ಲಿನ ಭಾವನೆ ದೃಢವಾಗಿ ಮತ್ತೆ ಈ ಪ್ರಯತ್ನ ಮಾಡುತ್ತಿದ್ದೇನೆ.

2005 ಡಿಸೆಂಬರ್ ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಸುದರ್ಶನ್ ಸಾಧನೆಯ ಬಗ್ಗೆ ಬರೆದಾಗ ನನ್ನ ಮನಸ್ಸಿನಲ್ಲಿ ಹುಟ್ಟಿಕೊಂಡಿದ್ದ ಅನೇಕ ಪ್ರಶ್ನೆಗಳನ್ನು ಓದುಗರ ಮುಂದಿಟ್ಟಿದ್ದೆ. ಈಗಲೂ ಆ ಪ್ರಶ್ನೆಗಳು ಅದೇ ಶೈಲಿಯ ವಸ್ತು ಸ್ಥಿತಿಯನ್ನು ಬಿಂಬಿಸುತ್ತಿವೆ. ಅಷ್ಟೇ ಅಲ್ಲ ಫಾರ್ಮುಲಾ-1 ಸ್ವಿಫ್ಟ್ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆದ್ದಾಗ ಪ್ರಮುಖ ರಾಷ್ಟ್ರೀಯ ಪತ್ರಿಕೆಗಳಲ್ಲಿ ಭಾರೀ ಸುದ್ದಿಯಾದರೂ ಅದು ನಮ್ಮ ಸಮಾಜಬಾಂಧವರಲ್ಲಿ ಬಹಳ ಮಂದಿಯ ಗಮನಕ್ಕೆ ಬರಲಿಲ್ಲ ಎಂಬುದು ನಿರ್ಲಿಪ್ತತೆಗೆ ಒಂದು ನಿದರ್ಶನವೇನೋ?


ಪತ್ರಿಕೆಯೊಂದರಲ್ಲಿ ಪ್ರಸಾರವಾದಂತೆ ಕರ್ನಾಟಕದಿಂದ ಈ ಸ್ಪರ್ಧೆ ಗೆದ್ದ ಮೊದಲಿಗರು ಸುದರ್ಶನ್. ಅವರು ನಮ್ಮ ಸಮಾಜದ ಪ್ರತಿಭೆ ಎಂಬುದು ಹೆಮ್ಮೆ ತರುವ ವಿಚಾರ. ಭಾರತದಲ್ಲಿ ಫಾರ್ಮುಲಾ-1 ಕ್ರೀಡೆಗೆ ಪ್ರೋತ್ಸಾಹ ಕಡಿಮೆ. ಪ್ರಾಯೋಜಕರೂ ಕಡಿಮೆ. ಉತ್ಸಾಹಿ ಯುವಕರ ಪ್ರತಿಭೆಗೆ ಪುಟಗೊಡುವ ಸೌಲಭ್ಯಗಳೂ ಇಲ್ಲ. ಎಫ್-1 ಟ್ರ್ಯಾಕ್‌ಗಳು ದೇಶದಲ್ಲಿರುವು 2 ಕಡೆ ಮಾತ್ರ. ಚೆನ್ನೈ ಹಾಗೂ ಕೊಯಮುತ್ತೂರಿನಲ್ಲಿ. ಇದು ಕ್ರಿಕೆಟ್ ಯುಗ. ಜಾಗ ದೊರಕಿದರೆ ಗಲ್ಲಿ ಗಲ್ಲಿಯಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾಗುವಷ್ಟು ಸ್ಪೂರ್ತಿ ನಮ್ಮಲ್ಲಿದೆ.

ಹಾಗಾದರೆ ಇತರ ಸ್ಪರ್ಧೆಗಳ ಪ್ರತಿಭೆಗಳ ಪಾಡೇನಾಗಬೇಕು. ಹಠಬಿಡದ ತ್ರಿವಿಕ್ರಮನಾಗುವದೇ ದಾರಿ. ರೇಸಿಂಗ್‌ನಲ್ಲಿ ನಾರಾಯಣ ಕಾರ್ತಿಕೇಯನ್ ಮತ್ತು ಶೂಮಾಕರ್‌ರಂತವರನ್ನು ಮಾದರಿಯಾಗಿಟ್ಟು ಕೊಂಡಿರುವ ಸುದರ್ಶನ್ ಎಫ್-1 ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಆದರೂ ಅದರಿಂದ ತೃಪ್ತನಾಗಿಲ್ಲ. ಸದ್ಯಕ್ಕೆ ಫಾರ್ಮುಲಾ ರೋಲಾನ್ ಮತ್ತು ವೋಲ್ಕ್ಸ್‌ವ್ಯಾಗನ್ ಸರಣಿಯಲ್ಲಿ ತೊಡಗಿಕೊಂಡು ಉತ್ತಮ ಪ್ರದರ್ಶನ ನೀಡುವ ಆಶಯದೊಂದಿಗೆ ಮುಂದಿನ ದಿನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವ ಆಶಯ ಹೊಂದಿದ್ದಾರೆ.

ಆರಂಭದಲ್ಲಿ ಹೆತ್ತವರ ಪ್ರಾಯೋಜಕತ್ವದಲ್ಲೇ ಪರಿಶ್ರಮಪಟ್ಟ ಈ ಎಳೆಯನಿಗೆ ಈಗೀಗ ಹೊರಗಿನವರ ಉತ್ತೇಜನ ದೊರೆಯುತ್ತಿದೆಯಂತೆ. ಎಫ್-1 ಸ್ವಿಫ್ಟ್ ಗೆದ್ದಾಗ ಟಿ.ವಿ.ಎಸ್. ಸಂಸ್ಥೆ ಆಸರೆ ನೀಡಿತ್ತು. ಅದಕ್ಕಿಂತ ಮೊದಲೂ ಅನೇಕ ವ್ಯಕ್ತಿಗಳು ಮತ್ತು ಸಂಸ್ಥೆಗಳು ಪ್ರಾಯೋಜಕತ್ವ ವಹಿಸಿ ಪ್ರೋತ್ಸಾಹ ನೀಡಿದ್ದರು. ಅವರಿಗೆ ನಾನು ಚಿರಋಣಿ ಎನ್ನುವ ಸುದರ್ಶನ್ ತನ್ನ ತಂದೆ-ತಾಯಿ (ಕರ್ವಾಲು ಶಂಕರ ನಾರಾಯಣ್ ರಾವ್ - ಸಂಧ್ಯಾರಾವ್) ಹಾಗೂ ತಂಗಿ ಸಂಗೀತಾ ನೆರವನ್ನು ಮರೆಯಲಾರೆ ಎನ್ನುತ್ತಾರೆ.

(ಮುಂದುವರಿಯುವುದು)

## ಸಂಕ್ರಮಣ ಸಾಹಿತ್ಯ ಸ್ಪರ್ಧೆ - ಶ್ರೀ ಕೃಷ್ಣಯ್ಯ ಅನಂತಪುರ ಅವರಿಗೆ ಬಹುಮಾನ



ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷರೂ ಖ್ಯಾತ ಸಾಹಿತಿಗಳೂ ಆದರ ಶ್ರೀ ಚಂದ್ರ ಶೇಖರ ಪಾಟೀಲ (ಚಂಪಾ)ರು ಸಂಪಾದಕರಾಗಿರುವ 'ಸಂಕ್ರಮಣ' ಪತ್ರಿಕೆ 2009ನೇ ವರ್ಷ ಏರ್ಪಡಿಸಿದ ಕರ್ನಾಟಕ ರಾಜ್ಯಮಟ್ಟದ ಸಾಹಿತ್ಯ ಸ್ಪರ್ಧೆಗಳಲ್ಲಿ ಕಾವ್ಯ ಪ್ರಕಾರದಲ್ಲಿ ಶ್ರೀ ಕೃಷ್ಣಯ್ಯ ಅನಂತಪುರ ಅವರ ಕವಿತೆ ಬಹುಮಾನಕ್ಕೆ ಆಯ್ಕೆಯಾಗಿದೆ. ಬಹುಮಾನಕ್ಕಾಗಿ ತೀರ್ಪುಗಾರರು ಆರಿಸಿದ ಹತ್ತು ಉತ್ತಮ ಕವಿತೆಗಳಲ್ಲಿ ಶ್ರೀ ಕೃಷ್ಣಯ್ಯ ಅನಂತಪುರ ಅವರ ''ಗೋಡೆ ಮತ್ತು ಸೇತುವೆ'' ಕವಿತೆ ಒಂದಾಗಿದೆ. ಪ್ರಮಾಣ ಪತ್ರ ಮತ್ತು ಬಹುಮಾನಗಳ ಜೊತೆಗೆ ಈ ಕವಿತೆ ''ಸಂಕ್ರಮಣ'' ಪತ್ರಿಕೆಯ ವಿಶೇಷಾಂಕದಲ್ಲಿ ಪ್ರಕಟವಾಗಲಿದೆ.

## ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು ಉಡುಪಿ ಇದರ ವಿವಿಧ ವೇದಿಕೆಗಳು (2009-2010)

**1. ಶ್ರೀ ಶಾರದಾ ವೇದಿಕೆ :**
ಅಧ್ಯಕ್ಷರು : ವೈ. ಮೋಹನ ರಾವ್, ಮುಖ್ಯ ಸಂಪಾದಕರು
ಸಂಚಾಲಕರು : ಎಚ್.ಎನ್. ಶ್ಯಾನುಭಾಗ್
ಸದಸ್ಯರು : ಟಿ. ಸುರೇಶ್ ರಾವ್ ನಿಟ್ಟೂರು, ಕೊಲ್ಪೆ ಪ್ರಕಾಶ್ ರಾವ್

**2. ವೈದ್ಯಕೀಯ ನೆರವು ವೇದಿಕೆ :**
ಅಧ್ಯಕ್ಷರು : ಯು. ಅರವಿಂದ ಕುಮಾರ್
ಸಂಚಾಲಕರು : ಡಾ। ಸನತ್ ರಾವ್
ಸದಸ್ಯರು : ಡಾ। ಬೈಕಾಡಿ ಸೂರ್ಯನಾರಾಯಣರಾವ್, ವೈ. ಸರ್ವಜ್ಞಮೂರ್ತಿ

**3. ಯುವ ವೇದಿಕೆ :**
(ಕ್ರೀಡೆ, ಕಲೆ ಮತ್ತು ಸಂಸ್ಕೃತಿ, ಸದಸ್ಯತನ)
ಅಧ್ಯಕ್ಷರು : ಮಂಜುನಾಥ ಹೆಬ್ಬಾರ್
ಸಂಚಾಲಕರು : ಪಿ.ಎಂ. ನಾಗರಾಜ್ ಹಿರಿಯಡ್ಕ
ಸದಸ್ಯರು : ಸುಧಾಕರ ರಾವ್ ಬೆಳ್ಳೆ, ವೈ. ಪ್ರಕಾಶ ಕುಮಾರ್, ಬಿ. ಜಯರಾಮ ರಾವ್, ದೇವರಾಜ ಶಾಸ್ತ್ರಿ ಹಿರಿಯಡಕ, ವಾಸುದೇವರಾವ್ ಕರಂದಾಡಿ, ಟಿ. ಜಗದೀಶ ರಾವ್ ಉಡುಪಿ, ಟಿ. ವಿಶ್ವನಾಥ ಶ್ಯಾನುಭಾಗ್, ಪ್ರಕಾಶ ಹೆಬ್ಬಾರ್

**4. ಆಂತರಿಕ**
**ಲೆಕ್ಕ ಪರಿಶೋಧಕರು:** ಕೆ. ವೆಂಕಟ್ರಾವ್ ಕರಂಬಳ್ಳಿ, ವೈ. ವಿಜಯಕುಮಾರ್ ರಾವ್ ಉಡುಪಿ

**5. ಮಂಟಪ ವೇದಿಕೆ :**
ಅಧ್ಯಕ್ಷರು : ಯು. ಪ್ರಫುಲ್ಲಚಂದ್ರ
ಸಂಚಾಲಕರು : ಕೆ. ಕೃಷ್ಣ ಕುಮಾರ್‌ರಾವ್ ಮಟ್ಟು
ಸದಸ್ಯರು : ಕೆ. ವೇಣುಗೋಪಾಲರಾವ್ ಅಂಬಲಪಾಡಿ, ಎ. ಭಾಗ್ಯಚಂದ್ರರಾವ್ ಅಲೆವೂರು

**6. ಕಟ್ಟಡ ವೇದಿಕೆ :**
ಅಧ್ಯಕ್ಷರು : ಎಸ್.ಎಂ. ರಾವ್
ಸಂಚಾಲಕರು : ಸಿ. ದೇವರಾವ್
ಸದಸ್ಯರು : ಜಯರಾಮ ಶಾಸ್ತ್ರಿ

**7. ಶಿಕ್ಷಣ ತರಬೇತಿ ಮತ್ತು ವಿದ್ಯಾರ್ಥಿವೇತನ ವೇದಿಕೆ :**
ಅಧ್ಯಕ್ಷರು : ಡಾ. ವೈ. ರವೀಂದ್ರನಾಥ ರಾವ್
ಸಂಚಾಲಕರು : ಪ್ರಭಾಕರ ಬಂಡಿ
ಸದಸ್ಯರು : ಪ್ರೊ. ಕೆ.ಎಸ್. ಪ್ರಭಾಕರ ರಾವ್, ವೈ. ಮುರಳೀಕೃಷ್ಣರಾವ್, ಕೃಷ್ಣ ಮೂರ್ತಿ ರಾವ್ ಬ್ರಹ್ಮಾವರ

**8. ಶಾರದಾ ದೇವಸ್ಥಾನ ವೇದಿಕೆ :**
ಅಧ್ಯಕ್ಷರು : ಬಿ. ವಾಸುದೇವ ರಾವ್
ಸಂಚಾಲಕರು : ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್
ಸದಸ್ಯರು : ಎಂ. ಸದಾನಂದ ರಾವ್ ಚಿಟ್ಪಾಡಿ, ಶ್ರೀಮತಿ ಪ್ರತಿಮಾ ವಿಠಲ ರಾವ್, ರವಿರಾಜರಾವ್ ಉಡುಪಿ, ವೈ. ವಿಠಲರಾವ್ ಚಿಟ್ಪಾಡಿ

**9. ಮಹಿಳಾ ವೇದಿಕೆ :**
ಅಧ್ಯಕ್ಷರು : ಉಷಾ ಎಲ್. ಶ್ಯಾನುಭಾಗ್
ಸಂಚಾಲಕರು : ಉಷಾ ಮೋಹನ್‌ದೇವ್
ಸದಸ್ಯರು : ಮಹಾಲಕ್ಷ್ಮೀ ಎನ್. ಶ್ಯಾನುಭಾಗ್, ವೈ. ವಿದ್ಯಾರಾವ್, ಗೀತಾ ಕೃಷ್ಣಕುಮಾರ್, ಶ್ರೀಮತಿ ವೇಣುಗೋಪಾಲರಾವ್, ಜಯಲಕ್ಷ್ಮೀ ಮುರಳೀಕೃಷ್ಣರಾವ್, ಸುನಂದಾ ರಾವ್, ವಾಣಿ ಬಂಡಿ, ರಜನಿ ಹೆಬ್ಬಾರ್, ಹೇಮಾ ಕೃಷ್ಣ ರಾವ್, ಉಷಾ ಮೋಹನ ರಾವ್, ವೀಣಾ ಜಯರಾಮ ರಾವ್

ಈ ಎಲ್ಲಾ ವೇದಿಕೆಗಳಲ್ಲಿ ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಖಾಯಂ ಆಹ್ವಾನಿತರು.

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ನಾಗವಲ್ಲಿ ಮತ್ತು ಶ್ರೀ ಕೊಕ್ರಾಡಿ ಸುರೇಶ್ ರಾವ್‌ರವರ ಪುತ್ರ ಚಿ। ಚೈತನ್ಯ ಹಾಗೂ ಶ್ರೀಮತಿ ಗೀತಾ ಮತ್ತು ಶ್ರೀ ಎಲ್ಲೂರು ಪ್ರಭಾಕರರಾವ್‌ರವರ ಪುತ್ರಿ ಚಿ।ಸೌ। ರಮ್ಯಾರ ವಿವಾಹವು ತಾ. 19-11-2009ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

ಪಡುಬಿದ್ರಿ ದಿ। ಕೆ. ಹಿರಿಯಣ್ಣ ಶಾಸ್ತ್ರಿ ಮತ್ತು ಶ್ರೀಮತಿ ಭಾರತಿ ಶಾಸ್ತ್ರೀಯವರ ಪುತ್ರಿ ಚಿ। ಸೌ। ಸೌಂದರ್ಯ ಹಾಗೂ ನರಸಿಂಹರಾಜಪುರ ತಾಲೂಕು ಸೀತೂರು ಗ್ರಾಮ ಅಜ್ರವಳ್ಳಿವಾಸಿ ಶ್ರೀಮತಿ ಮತ್ತು ಶ್ರೀ ಅನಂತಮೂರ್ತಿಯವರ ಪುತ್ರ ಚಿ। ಕಿರಣ್ ಇವರ ವಿವಾಹವು 22-11-2009ರಂದು ತೀರ್ಥಹಳ್ಳಿ ಗಾಯತ್ರಿ ಮಂದಿರದಲ್ಲಿ ನೆರವೇರಿತು.

★★★★

ಮೂಡಬಿದ್ರಿ ಶ್ರೀಮತಿ ಮತ್ತು ಶ್ರೀ ಬಿ. ನಾರಾಯಣ ರಾವ್‌ರವರ ಪುತ್ರ ಚಿ। ಭೋಜರಾಜ ಹಾಗೂ ಶ್ರೀಮತಿ ಮತ್ತು ಶ್ರೀ ಬಿ. ರಾಜಗೋಪಾಲರವರ ಪುತ್ರಿ ಚಿ। ಸೌ। ರೇಷ್ಮಾ ಇವರ ವಿವಾಹವು ತಾ. 22-11-2009ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಭವನದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ವಿಜಯ ನಂದನರವರ ಪುತ್ರಿ ಚಿ। ಸೌ। ಪ್ರತೀಕ್ಷಾ ಹಾಗೂ ದಿ। ಮಾಂಟ್ರಾಡಿ ಜಯರಾಮರ ಪುತ್ರ ಚಿ। ಸಂತೋಷ ಇವರ ವಿವಾಹವು ತಾ. 29-11-2009ರಂದು ಮಂಗಳೂರಿನ ಅಶೋಕ ನಗರದಲ್ಲಿರುವ ಗೋಕುಲ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಸೂರಿಂಜೆ ಪೊಂಗಾರು ಶ್ರೀಮತಿ ಮತ್ತು ಶ್ರೀ ರಾಜಗೋಪಾಲರ ಪುತ್ರಿ ಚಿ। ಸೌ। ಅಮೃತಲಕ್ಷ್ಮೀ ಹಾಗೂ ಬೆಟ್ಟಂಪಾಡಿ ಶ್ರೀಮತಿ ಮತ್ತು ಶ್ರೀ ಜನಾರ್ದನರಾಯರ ಪುತ್ರ ಚಿ। ಹರಿಪ್ರಸಾದ ಇವರ ವಿವಾಹವು ತಾ. 27-11-2009ರಂದು ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಎರ್ಮಾಳು ಶ್ರೀಮತಿ ವತ್ಸಲಾ ಮತ್ತು ಶ್ರೀ ರಘುರಾಮರಾಯರ ಪುತ್ರ ಚಿ। ಪ್ರಾಣೇಶ ಹಾಗೂ ಕಾಪು ಶ್ರೀಮತಿ ಗಾಯತ್ರಿ ಮತ್ತು ಶ್ರೀ ಶ್ರೀನಿವಾಸ ರಾಯರ ಪುತ್ರಿ ಚಿ। ಸೌ। ಸುಪ್ರೀತ ಇವರ ವಿವಾಹವು ತಾ. 29-11-2009ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ನಂದಾವರ ಕೌಳಿಗೆ ಗಿರಿಧರರಾಯರ ಪುತ್ರ ಚಿ। ಗುರುದೀಪ ಇವರ ವಿವಾಹವು ಶ್ರೀಮತಿ ಹೇಮ ಮತ್ತು ಶ್ರೀ ಅಲೆವೂರು ಕೃಷ್ಣರಾಯರ ಪುತ್ರಿ ಚಿ। ಸೌ। ಅಮ್ರಿತಾ ಇವರೊಂದಿಗೆ ತಾ. 11-12-2009ರಂದು ಕುಂಜಿಬೆಟ್ಟು ಶಾರದಾ ಕಲ್ಯಾಣಮಂಟಪದಲ್ಲಿ ಜರುಗಿತು.

★★★★

## ಅಭಿನಂದನೆಗಳು



### ನೇಹಾ ಎನ್. ರಾವ್

ಮಹಾರಾಷ್ಟ್ರದ ನಾಸಿಕ್‌ನ ಸೇಕ್ರೇಡ್ ಹಾರ್ಟ್ ಕಾನ್ವೆಂಟ್ ಹೈಸ್ಕೂಲಿನ ವಿದ್ಯಾರ್ಥಿನಿ ನೇಹಾ ಎನ್ ರಾವ್ 2009ರ ಮಾರ್ಚ್ ತಿಂಗಳಿನಲ್ಲಿ ನಡೆದ ಸೆಕೆಂಡರಿ ಸ್ಕೂಲ್ ಸರ್ಟಿಫಿಕೆಟ್ ಪರೀಕ್ಷೆ(10ನೇ ತರಗತಿ)ಯಲ್ಲಿ ಒಟ್ಟು 650 ರಲ್ಲಿ 608 ಅಂಕ (93.53%)ಗಳೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿ ಶಾಲೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾಳೆ.

ಮಹಾರಾಷ್ಟ್ರದ ನಾಸಿಕ್‌ನಲ್ಲಿ ವಾಸ್ತವ್ಯವಾಗಿರುವ ಚಿಟ್ಪಾಡಿ ನಾರಾಯಣ ಬಿ. ರಾವ್ ಹಾಗೂ ವಿದ್ಯಾ ಎಸ್. ರಾವ್ ದಂಪತಿಗಳ ಪುತ್ರಿಯಾದ ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು



### ಕು। ಶರಧಿ ಎಲ್. ರಾವ್

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನ ನವೋದಯ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 9ನೇ ತರಗತಿ ವಿದ್ಯಾರ್ಥಿನಿ ಕು। ಶರಧಿ ಎಲ್. ರಾವ್, ನವೋದಯ ವಿದ್ಯಾಲಯ ಸಮಿತಿಯವರು ನಡೆಸಿದ ರಾಷ್ಟ್ರ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಆಯ್ಕೆಯಾಗಿರುತ್ತಾಳೆ (ಬೆಸ್ಟ್ ಆಲ್‌ರೌಂಡರ್) ಈಕೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಾದ ನೃತ್ಯ ಚಿತ್ರಕಲೆ ಮತ್ತು ರಸಪ್ರಶ್ನೆಗಳಲ್ಲಿ ಒಂದನೇ ತರಗತಿಯಿಂದಲೂ ಅನೇಕ ಬಹುಮಾನ ಪಡೆದಿರುತ್ತಾಳೆ. ಅಂತರಾಷ್ಟ್ರೀಯ ಮಟ್ಟದ ವಿಜ್ಞಾನ ಮತ್ತು ಗಣಿತ ಪ್ರತಿಭಾ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ಹತ್ತನೇ ಬಹುಮಾನ ಪಡೆದಿದ್ದಾಳೆ. 2007ರಿಂದ ವಿಭಾಗೀಯ ಮಟ್ಟದಲ್ಲಿ ಬಹುಮಾನ ಪಡೆದಿದ್ದು ಈ ಭಾರಿ ಅವಳ ರಾಷ್ಟ್ರಮಟ್ಟದ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು. ಈಕೆ ಹೆಮ್ಮಾಡಿಯ ಲಕ್ಷ್ಮೀ ನಾರಾಯಣ ಹೆಬ್ಬಾರ್ ಮತ್ತು ಇಂದ್ರಾಣಿ ದಂಪತಿಗಳ ಪುತ್ರಿ.

### ಶುಭ ಜನನ

ಮೈಸೂರಿನಲ್ಲಿರುವ ಕುಬೇರ ಸೀತಾರಾಮ ರಾಯರ ಮಗಳು ಶ್ರೀಮತಿ ಸರೋಜಿನಿಯ ಮಗ ಹರೀಶನಿಗೆ ತಾ. 20.10.2009ರಂದು ಹೆಣ್ಣು ಮಗುವಿನ ಜನನ. ಶ್ರೀಯುತ ಹರೀಶ್ ಇವರು ಜರ್ಮನಿಗೆ ಪ್ರಯಾಣಿಸಿದಾರೆ.

## ಭೀಮರಥ ಶಾಂತಿ

ಶ್ರೀ ಬಿ.ಕೆ. ಮಾಧವ ರಾಯರಿಗೆ 80 ಸಂವತ್ಸರಗಳು ತುಂಬಿದ ಸಂದರ್ಭದಲ್ಲಿ ಅವರಿಗೆ ಭೀಮರಥ ಶಾಂತಿಯನ್ನು ಅವರ ಮಕ್ಕಳು, ಅಳಿಯಂದಿರು ಸೇರಿ ಬೈಲೂರಿನ ರಾಜರಾಜೇಶ್ವರಿ ಮನೆಯಲ್ಲಿ ತಾ. 28-11-2009ರಂದು ನೆರವೇರಿಸಿದರು.

## ಉದ್ಯೋಗದಲ್ಲಿ ಭಡ್ತಿ

ಕಾರ್ಕಳ ತಾಲೂಕಿನ ವಿಶ್ವಾಸನಗರದಲ್ಲಿರುವ ಕೆಲ್‌ಟೆಕ್ ಎನರ್ಜೀಸ್ ಲಿಮಿಟೆಡ್‌ನಲ್ಲಿ ಉದ್ಯೋಗಿಯಾಗಿರುವ ಪಣಂಬೂರು ಶಶಿಧರ ಶರ್ಮರು ಇತ್ತೀಚೆಗೆ ಜನರಲ್ ಮೆನೇಜರ್ ಆಗಿ ಭಡ್ತಿ ಹೊಂದಿರುತ್ತಾರೆ.

**ವಿಳಾಸ :**

ಜನರಲ್ ಮೆನೇಜರ್ (ವರ್ಕ್ಸ್)
ಕೆ.ಇ.ಎಲ್., ವಿಶ್ವಾಸನಗರ -574 108,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

## CHANGE OF ADDRESS

Srinivasa Rao
Laxmi Nivasa
H.No. 147-4th phase
Akshay Colony,
Behind Chetana Public School
Vidyanagar, Hubli - 580 021

## ವೈದ್ಯಕೀಯ ವೇದಿಕೆ–ಪ್ರಶ್ನೆ ಮತ್ತು ಉತ್ತರ

**ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ: ಮಲೇರಿಯ ಜ್ವರ ಹೇಗೆ ಬರುತ್ತದೆ? ಇದರ ಪರಿಹಾರೋಪಾಯಗಳೇನು?**

ಇದಕ್ಕೆ ಏನು ಪರಿಹಾರ?

**ಉತ್ತರ :** ಮಲೇರಿಯಾ ರೋಗವು ಪ್ಲಾಸ್ಮೋಡಿಯಂ ಎಂಬ ಏಕಾಣು ಜೀವಿಯಿಂದ ಬರುವ ಜ್ವರ. ಈ ಏಕಾಣು ಜೀವಿಯಲ್ಲಿ ಪ್ಲಾಸ್ಮೋಡಿಯಂ ವೈವಾಕ್ಸ್, ಫಾಲ್ಸಿಫಾರಂ, ಓವೇಲ್ ಹಾಗೂ ಮಲೇರಿಯೆ ಎಂಬ ನಾಲ್ಕು ಪ್ರಬೇದಗಳಿವೆ. ಈ ನಾಲ್ಕೂ ಪ್ರಬೇಧಗಳ ಮಲೇರಿಯಾ ಜ್ವರವು ಅನಾಫಿಲಿಸ್ ಎಂಬ ಜಾತಿಯ ಹೆಣ್ಣು ಸೊಳ್ಳೆಯ ಕಡಿತದಿಂದ ಮನುಷ್ಯನಿಂದ ಮನುಷ್ಯನಿಗೆ ಹರಡುತ್ತದೆ. ನಮ್ಮ ದೇಶದಲ್ಲಿ ಹೆಚ್ಚಿನ ಮಲೇರಿಯ ಜ್ವರವು ವೈವಾಕ್ಸ್ ಪ್ರಭೇದಕ್ಕೆ ಸೇರಿದ್ದು. ಹಾಗೆಯೇ ಫಾಲ್ಸಿಫಾರಂ ಪ್ರಭೇದದ ಮಲೇರಿಯ ಜ್ವರವು ಹೆಚ್ಚು ಸಾಮಾನ್ಯವಲ್ಲದಿದ್ದರೂ ಕೆಲವೊಮ್ಮೆ ಮಾರಣಾಂತಿಕವಾಗಬಹುದು.

ಅನಾಫಿಲಿಸ್ ಜಾತಿಯ ಹೆಣ್ಣು ಸೊಳ್ಳೆಯು ಮಲೇರಿಯ ರೋಗಿಯ ರಕ್ತವನ್ನು ಹೀರಿದ ಬಳಿಕ ಆ ರಕ್ತದಲ್ಲಿದ್ದ ಏಕಾಣು ಜೀವಿಯ ಮರಿಗಳು ಸೊಳ್ಳೆಯ ದೇಹದಲ್ಲಿ ಸುಮಾರು 10-20 ದಿನಗಳ ಕಾಲ ಬೆಳೆಯುತ್ತದೆ. ಹೀಗೆ ಸೊಳ್ಳೆಯ ದೇಹದಲ್ಲಿ ಬೆಳೆದ ಮರಿಗಳು ಸೊಳ್ಳೆ ಕಡಿತದ ಸಮಯದಲ್ಲಿ ಆರೋಗ್ಯವಂತ ಮನುಷ್ಯನ ದೇಹವನ್ನು ಸೇರುತ್ತದೆ. ಮನುಷ್ಯನ ದೇಹದಲ್ಲಿ ಈ ಮರಿಗಳು ಇನ್ನೂ 10 ದಿನಗಳ ನಂತರ ಪೂರ್ಣ ಪ್ರಮಾಣ ಜೀವಿಯಾಗಿ ಬೆಳೆದ ಮೇಲೆ ಆತನಲ್ಲಿ ಮಲೇರಿಯ ಜ್ವರದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ವಿಪರೀತ ಚಳಿ ಹಾಗೂ ಜ್ವರ, ವಿಪರೀತ ತಲೆನೋವು, ಮೈಕೈನೋವು ಇವು ಮಲೇರಿಯ ಜ್ವರದ ವಿಶೇಷ ಲಕ್ಷಣಗಳು. ರಕ್ತದ ಮಾದರಿಯಲ್ಲಿ ಮಲೇರಿಯಾ ರೋಗಾಣುವನ್ನು ಸೂಕ್ಷ್ಮ ದರ್ಶಕದ ಸಹಾಯದಿಂದ ನೋಡುವುದರ ಮೂಲಕ ಮಲೇರಿಯ ಜ್ವರವನ್ನು ಖಚಿತಪಡಿಸಿಕೊಳ್ಳಬಹುದು. ಜೋರಾಗಿ ಚಳಿ ಇದ್ದಾಗ ರಕ್ತ ಪರೀಕ್ಷೆ ಮಾಡಿಸಿದರೆ ಮಲೇರಿಯ ರೋಗಾಣುಗಳನ್ನು ಪತ್ತೆಹಚ್ಚಲು ಇನ್ನೂ ಸುಲಭ. ಮಲೇರಿಯಾ ಜ್ವರವನ್ನು ಕ್ವಿನೈನ್ ಜಾತಿಯ ಔಷಧಿಗಳ ಮುಖಾಂತರ ಸಂಪೂರ್ಣವಾಗಿ ಗುಣಪಡಿಸಬಹುದು. ಆದರೂ ರೋಗನಿಧಾನದಲ್ಲಿ ವಿಳಂಬವಾದರೆ ಸೂಕ್ತ ಚಿಕಿತ್ಸೆಯಾಗದಿದ್ದರೆ, ಫಾಲ್ಸಿ ಫಾರಮ್ ಪ್ರಭೇದದ ಮಲೇರಿಯಾ ಜ್ವರವಾಗಿದ್ದರೆ, ರೋಗಿಗೆ ಸಿಹಿಮೂತ್ರ, ವೃದಾಪ್ಯ, ನಿಶ್ಯಕ್ತಿಗಳಂತಹ ಇತರ ಖಾಯಿಲೆಗಳಿದ್ದರೆ ಅಂತಹ ಕೆಲವರಲ್ಲಿ ಮರಣ ಸಂಭವಿಸಬಹುದು.

ಸೊಳ್ಳೆಗಳಿಂದ ಕಚ್ಚಿಸಿಕೊಳ್ಳದಿರುವುದೊಂದೇ ಮಲೇರಿಯಾದಿಂದ ತಪ್ಪಿಸಿಕೊಳ್ಳುವ ಮಾರ್ಗ. ಇದಕ್ಕೆ ಕೆಲವು ಕಿರು ಸಲಹೆಗಳು -

- ★ ಸೊಳ್ಳೆಗಳಿಗೆ ಮುಸ್ಸಂಜೆಯ ಹೊತ್ತು ಕಚ್ಚುವ ಅಭ್ಯಾಸವಿರುವುದರಿಂದ ಆ ಹೊತ್ತಿನಲ್ಲಿ ಮನೆಯ ಹೊರಗೆ ಅನಗತ್ಯವಾಗಿ ಇರಬಾರದು.
- ★ ಸೊಳ್ಳೆಗಳಿಗೆ ಸಂಜೆಯ ಹೊತ್ತು ಮನೆಗೆ ಪ್ರವೇಶಿಸುವ ಅಭ್ಯಾಸವಿರುವುದರಿಂದ ಆ ಹೊತ್ತಿಗೆ ಕಿಟಕಿಬಾಗಿಲುಗಳನ್ನು ಮುಚ್ಚಿರಬೇಕು, ಕಿಟಕಿಗಳಿಗೆ ಸೊಳ್ಳೆಪರದೆ ಅಳವಡಿಸುವುದು ಉತ್ತಮ.
- ★ ಸೊಳ್ಳೆಗಳಿಗೆ ಕಚ್ಚಲಾಗದಂತೆ ಮೈತುಂಬಾ ಬಟ್ಟೆ ಧರಿಸಿರಬೇಕು.
- ★ ನಿದ್ರಿಸುವಾಗ ಸೊಳ್ಳೆಗಳಿಂದ ಪಾರಾಗಲು ಸೊಳ್ಳೆ ಪರದೆಗಳಿಗಿಂತ ಉತ್ತಮ ಉಪಾಯ ಇನ್ನೊಂದಿಲ್ಲ.
- ★ ಸೊಳ್ಳೆ ಓಡಿಸುವ ಬತ್ತಿಗಳು, ವಿದ್ಯುತ್ ಚಾಲಿತ ಸಾಧನಗಳು ಸರಿಯಾಗಿ ಉಪಯೋಗಿಸಿದರೆ ತಕ್ಕಮಟ್ಟಿಗೆ ಉಪಯುಕ್ತವಾಗಬಲ್ಲವು.
- ★ ಹಗಲುಹೊತ್ತಿನಲ್ಲಿ ಮನೆಯೊಳಗೆ ಮಂಚಕುರ್ಚಿಗಳ ಕೆಳಭಾಗದಲ್ಲಿ, ಬೆಳಕಿಲ್ಲದ ಪ್ರದೇಶಗಳಲ್ಲಿ ಸೊಳ್ಳೆಗಳು ವಿಶ್ರಾಂತಿ ಪಡೆಯುತ್ತವೆ. ಮನೆಯನ್ನು ಸ್ವಚ್ಛಗೊಳಿಸುವಾಗ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡಿರಬೇಕು.

ಸೊಳ್ಳೆಗಳು ನಿಂತ ನೀರಿನಲ್ಲಿ ಮೊಟ್ಟೆಯಿಡುತ್ತವೆ. ಹಾಗಾಗಿ ಮನೆಯ ಸುತ್ತಮುತ್ತ, ಟೆರೇಸಿನ ಮೇಲೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಬಿಸಾಕಿದ ಡಬ್ಬ, ಪ್ಲಾಸ್ಟಿಕ್ ತೆಂಗಿನ ಚಿಪ್ಪುಗಳಲ್ಲಿ ನಿಂತ ನೀರು ಸೊಳ್ಳೆಗಳ ವಂಶಾಭಿವೃದಿಯ ಸೂಕ್ತ ತಾಣಗಳು. ಇವುಗಳನ್ನು ಎಲ್ಲೆಂದರಲ್ಲಿ ಬಿಸಾಕದೆ ಸೂಕ್ತ ವಿಲೇವಾರಿ ಮಾಡಬೇಕು. ಪಾಯಖಾನೆಯ ಚೇಂಬರ್‌ನಂತಹ ನೀರು ನಿಲ್ಲಲೇಬೇಕಾದ ಕಡೆಗಳಲ್ಲಿ ವಾರಕ್ಕೊಮ್ಮೆ ನೀರಿಗೆ ಸ್ವಲ್ಪ ಸೀಮೆ ಎಣ್ಣೆ ಬೆರೆಸಿದರೆ ಮರಿಗಳು ನಾಶವಾಗುವುವು. ಕೈತೋಟದಲ್ಲಿ ಕೊಳಗಳಿದ್ದರೆ ಅದರಲ್ಲಿ ಮೀನು ಹಾಕಿದರೆ ಅದು ಸೊಳ್ಳೆಯ ಮರಿಯನ್ನು ತಿನ್ನುವುದು. ಮನೆಯ ಒಳಗೆ ಮತ್ತು ಸುತ್ತಮುತ್ತ ಒಮ್ಮೆ ಡಿ.ಡಿ.ಟಿ. ಸಿಂಪಡಿಸುವುದರ ಮೂಲಕ ನಂತರ ಸುಮಾರು ಆರು ತಿಂಗಳ ಕಾಲ ಸೊಳ್ಳೆಗಳನ್ನು ನಿಯಂತ್ರಣದಲ್ಲಿಡಬಹುದು.

ಸೊಳ್ಳೆಗಳ ನಾಶ ನಮ್ಮೆಲ್ಲರಿಗೂ ಒಂದು ಸಾಮಾಜಿಕ ಬದತೆ. ಇದಕ್ಕನುಗುಣವಾಗಿ ಎಲ್ಲರೂ ಸಹಕರಿಸಿದರೆ ಮಾತ್ರ ಮಲೇರಿಯಾ ನಿರ್ಮೂಲನೆ ಸಾಧ್ಯ.

**ಆರೋಗ್ಯಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ.: 98451 36322**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು

ಸಮಾಜ ಬಾಂಧವರೇ,

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 3-1-2010ನೇ ಆದಿತ್ಯವಾರದಂದು ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕ ಮಹಾಸಭೆ ಹಾಗೂ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತಿದ್ದೇವೆ.

ಅಧ್ಯಕ್ಷರು ಮತ್ತು ಸರ್ವಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

ಕಾರ್ಯಕ್ರಮಗಳು

ಬೆಳಿಗ್ಗೆ 9-00 ರಿಂದ-ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ ; 9-30ರಿಂದ - ಸಾಮೂಹಿಕ ಸತ್ಯನಾರಾಯಣ ಪೂಜೆ ಪ್ರಾರಂಭ ; 10-00 ರಿಂದ-ಅಡುಗೆ ಸ್ಪರ್ಧೆ, ಹೂ ಜೋಡಣಾ ಸ್ಪರ್ಧೆ; 11-00 ರಿಂದ - ವಾರ್ಷಿಕ ಮಹಾಸಭೆ; 12-30 ರಿಂದ - ಮಹಾಮಂಗಳಾರತಿ; 1-00 ರಿಂದ - ಪ್ರಸಾದ ಭೋಜನ; 2-00 ರಿಂದ-ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ; 4-00 ರಿಂದ - ಶ್ರೀ ರಾಮಕೃಷ್ಣ ಕಾಟುಕುಕ್ಕೆ ಅವರಿಂದ 'ದಾಸ ಸಂಕೀರ್ತನೆ'

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಅನಿಲ್ ರಾವ್ ಬಿ.ಎಸ್. - 9880037110

ನಾಗರಾಜ್ ವರ್ಕಾಡಿ - 9343344079 ಅರುಣಾ ಸೋಮಶೇಖರ - 2452860

## ವೈದ್ಯಕೀಯ ನೆರವು ವೇದಿಕೆ

### ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಡುಪಿ

ನಮ್ಮ ಸಂಘದ ಆಶ್ರಯದಲ್ಲಿ ಎರಡು ವರ್ಷಗಳ ಹಿಂದೆಯೇ ವೈದ್ಯಕೀಯ ನೆರವು ನಿಧಿಯನ್ನು ಆರಂಭಿಸಿದ್ದೇವೆ. ಅನಾರೋಗ್ಯ ಪೀಡಿತರಾಗಿ ಸಂಕಷ್ಟದಲ್ಲಿರುವ ನಮ್ಮ ಸಮಾಜ ಬಾಂಧವರು ಹಣದ ಕೊರತೆಯಿಂದ ತಕ್ಕ ಚಿಕಿತ್ಸೆಯಿಂದ ವಂಚಿತರಾಗಬಾರದೆಂಬ ಉದ್ದೇಶ ನಮ್ಮದು. ನೆರವಿನ ಅಗತ್ಯವುಳ್ಳ ನಮ್ಮ ಸಮಾಜಬಾಂಧವರು ಕೆಲವು ಶರತ್ತಿಗೊಳಪಟ್ಟು ನೆರವಿಗಾಗಿ ಅರ್ಜಿ ಸಲ್ಲಿಸಬಹುದು. ನಿಬಂಧನೆಗಳು ಈ ರೀತಿ ಇವೆ -

★ ಒಬ್ಬರಿಗೆ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಈ ನೆರವು ದೊರೆಯುತ್ತದೆ.
★ ಒಳರೋಗಿಯಾಗಿ ಪಡೆಯುವ ಚಿಕಿತ್ಸೆಗೆ ಮಾತ್ರ ಧನಸಹಾಯ
★ ಆಸ್ಪತ್ರೆಯ ಕನಿಷ್ಟ ಬಿಲ್ಲು 30,000 ರೂ. ಮೀರಿರಬೇಕು.
★ ಆಸ್ಪತ್ರೆಯ ಡಿಸ್ಚಾರ್ಜ್ ಸಮರಿ ಸಮೇತ ಎಲ್ಲ ಬಿಲ್ಲುಗಳನ್ನು (ಅಸಲು ಪ್ರತಿ) ಲಗತ್ತಿಸಿರಬೇಕು ಹಾಗೂ ಇವುಗಳನ್ನು ಹಿಂತಿರುಗಿಸಲಾಗುವುದಿಲ್ಲ.
★ ಮೊದಲು ಬಂದವರಿಗೆ ಪ್ರಾಶಸ್ತ್ಯ ಹಾಗೂ ನಮ್ಮಲ್ಲಿ ಧನಲಭ್ಯತೆ ಇರುವ ತನಕ ಮಾತ್ರ ನೆರವು ನೀಡಬಲ್ಲೆವು.
★ ನಮ್ಮ ಸಂಘದ ಗೌರವಾನ್ವಿತ ಸದಸ್ಯರ ಶಿಫಾರಸು ಇದ್ದರೆ ಉತ್ತಮ.
★ ಕಿಡ್ನಿ ಡಯಾಲಿಸಿಸ್ ರೋಗಿಗಳಿಗೆ ಒಳರೋಗಿಯಾಗಿರುವ ಶರತ್ತು ಅನ್ವಯಿಸುವುದಿಲ್ಲ.
★ ಸಂಘದ ನಿರ್ಣಯವೇ ಅಂತಿಮ

ಅರ್ಜಿ ಕಳುಹಿಸಬೇಕಾದ ವಿಳಾಸ : ಕಾರ್ಯದರ್ಶಿ , ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ - 576 102

(ಅರ್ಜಿಯ ತ್ವರಿತ ವಿಲೇವಾರಿಗಾಗಿ ಕವರಿನ ಮೇಲ್ಗಡೆ "ವೈದ್ಯಕೀಯ ನೆರವಿಗಾಗಿ ಅರ್ಜಿ" ಎಂದು ಉಲ್ಲೇಖಿಸಿ)

ಈ ಮಹದುದ್ದೇಶದ ಯೋಜನೆಯನ್ನು ಯಶಸ್ವಿಯಾಗಿಯೂ, ನಿರಂತರವಾಗಿಯೂ ನಡೆಸುವಂತಾಗಲು ಸಮಾಜಬಾಂಧವರು ದೇಣಿಗೆಗಳನ್ನು "ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಳಿತಾಯ ಖಾತೆ ನಂ. 220/2928 ಸಿಂಡಿಕೇಟ್ ಬ್ಯಾಂಕ್, ರಥಬೀದಿ ಬ್ರಾಂಚ್" ಈ ಹೆಸರಿನಲ್ಲಿ ಚೆಕ್ ಅಥವಾ ಡಿಡಿಗಳ ರೂಪದಲ್ಲಿ ಕಾರ್ಯದರ್ಶಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102 ಎಂಬ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

ದಿವಂಗತರಾದ ಶ್ರೀ ಮಧುಕರ್ ಧಾರೇಶ್ವರ್ ಅವರ ಪತ್ನಿ ಶ್ರೀಮತಿ ಲತಾ ಧಾರೇಶ್ವರ್ ಬೆಂಗಳೂರು ಇವರು ಈಗಾಗಲೇ ರೂ. 25,000/-ಗಳನ್ನು ದೇಣಿಗೆಯಾಗಿ ನೀಡಿ ಪ್ರೋತ್ಸಾಹಿಸಿರುತ್ತಾರೆ. ಅವರಿಗೆ ಶ್ರೀ ಶಾರದಾಂಬೆಯು ಶುಭವನ್ನು ಕರುಣಿಸಲೆಂದು ಹಾರೈಸುತ್ತೇವೆ.


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


## ಯುವ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ

## ಶ್ರೀ ಶಾರದಾ ಟ್ರೋಫಿ-ಕ್ರಿಕೆಟ್ ಪಂದ್ಯಾಟ - 2010

ತಾ. 31-01-2010ನೇ ರವಿವಾರ : ಉಡುಪಿಯ ಎಂ.ಜಿ.ಎಂ. ಕ್ರೀಡಾಂಗಣದಲ್ಲಿ ನಡೆಯಲಿದೆ.

ಆಸಕ್ತ ತಂಡಗಳು 20-1-2010ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (ಫೋನ್.: 0820 - 2520754); ಮಂಜುನಾಥ ಹೆಬ್ಬಾರ್ (ಮೊ.: 96110 99894 / 9448437893) ಅಥವಾ ದೇವದಾಸ್ ಶಾಸ್ತ್ರಿ (ಮೊ.:9901537503) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿ.ಸೂ.: 1. ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.

2. ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.

3. ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

4. ವಿಜೇತ ತಂಡಗಳಿಗೆ ಶಾರದಾ ಟ್ರೋಫಿಯೊಂದಿಗೆ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸ್ಮರಣಿಕೆಯನ್ನು ನೀಡಲಾಗುತ್ತದೆ.

ಅದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಜ್ಯೂನಿಯರ್ ಕ್ರಿಕೆಟ್ ಸ್ಪರ್ಧೆಯೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

**ಒಳಾಂಗಣ ಕ್ರೀಡಾ ಸ್ಪರ್ಧೆಗಳು**

ತಾ. 31-1-2010 ಬೆಳಿಗ್ಗೆ 9-00ರಿಂದ

**ಮಹಿಳಾ ವೇದಿಕೆ**ಯ ಸಹಯೋಗದೊಂದಿಗೆ ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀಶಾರದಾ ಮಂಟಪದಲ್ಲಿ **ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.

ಸ್ಪರ್ಧೆಯ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಮಹಿಳೆಯರು ಮತ್ತು ಮಕ್ಕಳು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಧ್ಯಕ್ಷರು ಮತ್ತು ಸಂಚಾಲಕರು
ಮಹಿಳಾ ವೇದಿಕೆ


**ನಮ್ಮಲ್ಲಿ ಧಾರ್ಮಿಕ ಸಮಾರಂಭ ಕಾರ್ಯಕ್ರಮಗಳನ್ನು ವೈದಿಕ ವಿಧಿಯಂತೆ ನಡೆಸಿಕೊಡಲಾಗುವುದು ಹಾಗೂ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಿಕೊಡಲಾಗುವುದು.**

ಸಂಪರ್ಕಿಸಿರಿ

**ಕೆ. ರಾಮಮೂರ್ತಿ ಭಟ್,** ಪುರೋಹಿತರು

ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010




**ರಾಮಾ ಅಟೋಮೊಬೈಲ್ಸ್**


**ಮಾರುತಿ ವಾಹನ ತಜ್ಞರು**

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ





ದೇವಿಕೃಪಾ ಏಜೆನ್ಸೀಸ್, ನಂದಿಕೂರು



**ಫೋನ್ :** 2556536 (R), 2555466 (0)

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮೊಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


Owned & Published by : B. Krishnamoorthy Rao Ambalpady, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org